ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ತಿರುವುನಂತಪುರಂ ನಲ್ಲಿ ಶ್ರೀಲಂಕಾ ವಿರುದ್ಧ ನಡೆದ 4ನೇ ಟಿ-20 ಪಂದ್ಯದಲ್ಲಿ ಅರ್ಧ ಶತಕ (46 ಎಸೆತ 79 ರನ್) ಗಳಿಸಿದ ಶಫಾಲಿ ವರ್ಮಾ....

29 ಡಿಸೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 287 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕುವೆಂಪು ಶತಮಾನದ ಭಾಗ್ಯ » 2



ಜನ ಸಾಮಾನ್ಯರ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವ ಬಿಜೆಪಿ » 3



ತಾಲ್ಲೂಕು ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ » 4

## ಜಿಲ್ಲೆಗಿಂದು ಮಾಜಿ ಪ್ರಧಾನಿ ದೇವೇಗೌಡರ ಭೇಟಿ

• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಡಿ. 29ರ ಸೋಮವಾರ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಗೆ ಬೆಳಿಗ್ಗೆ 10 ಗಂಟೆಗೆ ವಿಶೇಷ ಹೆಲಿಕಾಪ್ಟರ್ ಮೂಲಕ ಆಗಮಿಸುವ ಅವರು ಶ್ರೀ ದೇವೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸುವರು. ಮಧ್ಯಾಹ್ನ 12 ಗಂಟೆಗೆ ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪ ದಲ್ಲಿ ನಡೆಯುವ ಜಿಲ್ಲಾ ಜೆಡಿಎಸ್ ಪ್ರಮುಖರ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಜಿಲ್ಲೆಯ ಜೆಡಿಎಸ್ ಶಾಸಕರು, ಮಾಜಿ ಶಾಸಕರು, ಮುಖಂಡರು ಹಾಗು ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಸ್ಥಳೀಯ ಸಂಸ್ಥೆ ಚುನಾವಣೆ ಹಿನ್ನಲೆಯಲ್ಲಿ ಪಕ್ಷ ಸಂಘಟನೆ ಉದ್ದೇಶದಿಂದ ಜ. 23 ರಂದು ಹಾಸನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಂಡಿದ್ದು, ಪೂರ್ವ ಸಿದ್ಧತೆಗಾಗಿ ಈ ಸಭೆ ನಡೆಸಲಾಗುತ್ತಿದೆ.

# ಮೂರು ತಿಂಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ

### ಸಚಿವ ಪ್ರಿಯಾಂಕ್‌ಗೆ ಡಿಸಿಎಂ ಡಿ.ಕೆ.ಶಿ. ಸೂಚನೆ | ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆ

• ಪ್ರಜೋದಯ ವರದಿ

**ಬೆಂಗಳೂರು:** ಲೋಕಸಭಾ ಚುನಾವಣಾ ಬಳಿಕ ರಾಜ್ಯ ಮತ್ತೊಂದು ಚುನಾವಣಾ ಹಬ್ಬಕ್ಕೆ ಸಿದ್ಧಗೊಂಡಿದ್ದು ಜಿಲ್ಲಾ, ತಾಲ್ಲೂಕು ಹಾಗು ಸ್ಥಳೀಯ ಸಂಸ್ಥೆ ಚುನಾವಣೆಗೆ ವೇದಿಕೆ ತಯಾರಾಗುತ್ತಿದೆ. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಜೊತೆ ಹೊಂದಾಣಿಕೆ ಅಸಾಧ್ಯ ಎಂದಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ನೇರ ಸ್ಪರ್ಧೆಯ ಸುಳಿವು ನೀಡಿದ್ದಾರೆ.

ಇತ್ತೀಚೆಗೆ ನಡೆದ ಉತ್ತರ ಕನ್ನಡ, ದೊಡ್ಡಬಳ್ಳಾಪುರ, ದಕ್ಷಿಣ ಕನ್ನಡ ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವುದು ಕಾಂಗ್ರೆಸ್‌ಗೆ ತಲೆನೋವು ತರಿಸಿದೆ. ಈ ಹಿನ್ನಲೆಯಲ್ಲಿ ಭಾನುವಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, 2 ರಿಂದ 3 ತಿಂಗಳೊಳಗೆ ಚುನಾವಣೆ ನಡೆಸಬೇಕೆಂದು ಸೂಚಿಸಿದ್ದಾರೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ಎರಡು-ಮೂರು ತಿಂಗಳಲ್ಲಿ ಜಿಲ್ಲಾ ಪಂಚಾಯಿತಿ ಹಾಗು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ನಡೆಸಬೇಕಿದೆ. ಅದಕ್ಕೂ




> ತಳಮಟ್ಟದಲ್ಲಿ ನಾಯಕರನ್ನು ಸೃಷ್ಟಿ ಮಾಡಲು ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಅವಕಾಶ ನೀಡಿದೆ. ಇಲ್ಲಿ ಶೇ. 50ರಷ್ಟು ಹೆಣ್ಣು ಮಕ್ಕಳಿಗೆ ಮೀಸಲಾತಿ ನೀಡಲಾಗಿದೆ. ಸರ್ವ ಸಮುದಾಯಗಳ ಏಳಿಗೆಯೇ ಕಾಂಗ್ರೆಸ್ ಧ್ಯೇಯ. ಮುಂಬರುವ ಚುನಾವಣೆಗಳನ್ನು ಕಾರ್ಯಕರ್ತರು ಗಂಭೀರವಾಗಿ ಪರಿಗಣಿಸಬೇಕು.
> -ಡಿ.ಕೆ.ಶಿವಕುಮಾರ್, ಡಿಸಿಎಂ

**ಯಾರೂ ಅಡಿಪಾಯ ಹಾಕಬೇಡಿ**

ಎಲ್ಲಾ ಜಿಲ್ಲಾ ಹಾಗು ತಾಲ್ಲೂಕು ಅಧ್ಯಕ್ಷರು ಕಾಂಗ್ರೆಸ್ ಭವನ ಕಟ್ಟಡಕ್ಕೆ ಅಡಿಪಾಯ ಹಾಕಲು ಹೋಗಬಾರದು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗು ರಾಹುಲ್ ಗಾಂಧಿ ಅವರು ಬೆಂಗಳೂರಿನಲ್ಲಿ ವರ್ಚುಯಲ್ ಆಗಿ ಎಲ್ಲಾ ಭವನಗಳ ಅಡಿಪಾಯಗಳಿಗೆ ಚಾಲನೆ ನೀಡಲಿದ್ದಾರೆ. ಆದರೆ ಎಲ್ಲಾ ತಯಾರಿಗಳನ್ನು ಈಗಲೇ ಮಾಡಿಕೊಳ್ಳಬೇಕೆಂದರು.



ಈಗಿನಿಂದಲೇ ತಯಾರಿ ಮಾಡಿಕೊಳ್ಳಬೇಕೆಂದು ಸೂಚನೆ ನೀಡಿದ್ದೇನೆ. ಮೀಸಲಾತಿ ವಿಚಾರವಾಗಿ ನ್ಯಾಯಾಲಯಗಳಲ್ಲಿ ಇರುವ ಅಡೆತಡೆಗಳನ್ನು ಬಗೆಹರಿಸಿ ಇನ್ನೆರಡು ತಿಂಗಳಲ್ಲಿ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ ಎಂದರು.

**ಬೂತ್ ಕಾರ್ಯಕರ್ತರಿಗೆ ಅವಕಾಶ**

ಯಾರು ಬೂತ್ ಮಟ್ಟದಲ್ಲಿ ಕೆಲಸ ಮಾಡುತ್ತಾರೋ ಅವರಿಗೆ ಅವಕಾಶ ನೀಡಲಾಗುವುದು. ಈ ನಿಟ್ಟಿನಲ್ಲಿ ಯಾರು ಏನೇ ಹೇಳಿದರೂ ಕೇಳುವುದಿಲ್ಲ. ಕೆಲಸ ಮಾಡಿದವರಿಗೆ ಆದ್ಯತೆ ನೀಡಲಾಗುತ್ತದೆ. ಗ್ಯಾರಂಟಿ ಸಮಿತಿ ಸದಸ್ಯರು, ಬೆಸ್ಕಾಂ, ಆರೋಗ್ಯ ಸಮಿತಿ ಸೇರಿ ಇತರ ಇಲಾಖೆಗಳಿಂದ ನಾಮನಿರ್ದೇಶನ ಮಾಡಿರುವ ಸದಸ್ಯರ ಸಂಖ್ಯೆಯೇ 150-200 ಇದ್ದು, ಎಲ್ಲರೂ ಹೋರಾಟದ ಜವಾಬ್ದಾರಿ ತೆಗೆದು ಕೊಳ್ಳಬೇಕು. ಅದರ ಉಸ್ತುವಾರಿಗೆ ಜಿ.ಸಿ.ಚಂದ್ರಶೇಖರ್ ಅವರ ನೇತೃತ್ವದಲ್ಲಿ ವೀಕ್ಷಕರನ್ನು ನೇಮಿಸಲಾಗುತ್ತದೆ ಎಂದರು.

**ಗಾಂಧಿ ಹೆಸರು ಅಳಿಸುವುದು ಅಸಾಧ್ಯ**

ಮಹಾತ್ಮ ಗಾಂಧೀಜಿ ಅವರ ಹೆಸರನ್ನು ಈ ದೇಶದ ಇತಿಹಾಸದಿಂದ ಅಳಿಸಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ. ಬಿಜೆಪಿ ಹಾಗು ಅವರ ಅಧಿಕಾರ ಯಾವುದೂ ಶಾಶ್ವತವಲ್ಲ. ಆ ಪಕ್ಷ ಇನ್ನೆಷ್ಟು ದಿನ ಇರುತ್ತದೆ. ಎಲ್ಲದಕ್ಕೂ ಕೊನೆ ಎಂಬುದು ಇರಲೇಬೇಕಲ್ಲವೇ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಎಂತೆಂಥಹ ಚಕ್ರವರ್ತಿಗಳೇ ಮೂಲೆ ಗುಂಪಾಗಿದ್ದಾರೆ. ಅಲೆಗ್ಸಾಂಡರ್ ದಿ ಗ್ರೇಟ್ ಇಡೀ ಪ್ರಪಂಚದ ಮುಕ್ಕಾಲು ಪಾಲು ಗೆದ್ದವರೇ ಶಾಶ್ವತವಲ್ಲ. ಸದ್ದಾಂ ಹುಸೇನ್ ಕೊನೆಗಾಲದಲ್ಲಿ ಅವಿತುಕೊಳ್ಳಬೇಕಾಯಿತು. ಇನ್ನು ಬೇರೆಯವರದ್ದು ಯಾವ ಲೆಕ್ಕ. ಮನರೇಗಾ ಹೆಸರು ಬದಲಾವಣೆ ವಿರೋಧಿಸಿ ಜ. 5ರಿಂದ ಪಂಚಾಯಿತಿ ಮಟ್ಟದಿಂದ ಹೋರಾಟ ಆರಂಭಿಸಲಾಗುವುದೆಂದು ತಿಳಿಸಿದರು.

ಮಹಾತ್ಮ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಚುಕ್ಕಾಣಿ ಹಿಡಿದು 101 ವರ್ಷವಾಗಿದೆ. ಕಳೆದ ವರ್ಷ ಬೆಳಗಾವಿಯಲ್ಲಿ ಸಂಭ್ರಮಾಚರಣೆ ಮಾಡಿದ್ದೆವು. ಇಂತಹ ಸಂದರ್ಭದಲ್ಲಿ ಮಹಾತ್ಮ ಗಾಂಧಿ ಅವರ ಹೆಸರನ್ನು ತೆಗೆಯುವ ಕೆಲಸ ಮಾಡಲಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಗ್ರಾಮೀಣ ಭಾಗದಲ್ಲಿ ಬಡವರಿಗೆ ಉದ್ಯೋಗ ನೀಡುವ ಮನರೇಗಾ ಯೋಜನೆ ತಂದಿತ್ತು. ಕೇಂದ್ರ ಬಿಜೆಪಿ ಸರ್ಕಾರ ಈ ಯೋಜನೆಯನ್ನು ಹತ್ಯೆ ಮಾಡಲು ಮುಂದಾಗಿದೆ ಎಂದರು.

## ಇಂದು ಪತ್ರಕರ್ತರ ಸಂಘದ ಕ್ಯಾಲೆಂಡರ್ ಬಿಡುಗಡೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಡಿ. 29ರ ಸೋಮವಾರ ಬೆಳಿಗ್ಗೆ 9.30ಕ್ಕೆ ಸಂಘದ ಕ್ಯಾಲೆಂಡರ್ ಬಿಡುಗಡೆ ಹಾಗು 2025-28ನೇ ಸಾಲಿನ ತಾಲ್ಲೂಕು ಘಟಕಗಳ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ.

ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು ಅಧ್ಯಕ್ಷತೆ ವಹಿಸುವರು. ರಾಜ್ಯ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನ ಗೌಡ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಜಿಲ್ಲಾ ಹಾಗು ತಾಲ್ಲೂಕು ಸಂಘದ ಎಲ್ಲಾ ಪದಾಧಿಕಾರಿಗಳು ಹಾಗು ಸದಸ್ಯರು ಪಾಲ್ಗೊಳ್ಳುವಂತೆ ಸಂಘದ ಪದಾಧಿಕಾರಿಗಳು ಕೋರಿದ್ದಾರೆ.

## ರಾಷ್ಟ್ರ ಅಭಿವೃದ್ಧಿಗೆ ಕಾಂಗ್ರೆಸ್ ಕೊಡುಗೆ ಅಪಾರ

• ಪ್ರಜೋದಯ ವರದಿ

**ಹಾಸನ:** ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಗಮನಾರ್ಹ ಪಾತ್ರ ವಹಿಸಿದ ಕಾಂಗ್ರೆಸ್ 140 ವರ್ಷಗಳನ್ನು ಪೂರೈಸಿದೆ ಮಾತ್ರವಲ್ಲದೆ ರಾಷ್ಟ್ರ ಅಭಿವೃದ್ಧಿಗೆ ತನ್ನದೇಯಾದ ಕೊಡುಗೆ ನೀಡಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಈ.ಹೆಚ್.ಲಕ್ಷ್ಮಣ್ ಅವರು ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಏರ್ಪಡಿಸಿದ್ದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮಹನೀಯರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, 1885ರ ಡಿ.28 ರಂದು ಕಾಂಗ್ರೆಸ್ ಅಧಿಕೃತವಾಗಿ ಚಾಲನೆ ಪಡೆಯಿತು. ಪಕ್ಷ ಸಂಘಟನೆಯಲ್ಲಿ ಅನೇಕರು ಶ್ರಮಿಸಿದ್ದಾರೆ. ಸುದೀರ್ಘ ಇತಿಹಾಸ ಹೊಂದಿರುವ ಪಕ್ಷವು ಭಾರತದ ಅಭಿವೃದ್ಧಿಯಲ್ಲಿ ಗಮನಾರ್ಹ ಪಾತ್ರ ನಿಬಾಯಿಸಿದೆ ಎಂದರು.

ಜಿಲ್ಲಾ ರೆಡ್ ಕ್ರಾಸ್ ಸಭಾಪತಿ ಹೆಚ್.ಪಿ.ಮೋಹನ್ ಅವರು ಮಾತನಾಡಿ, ಬ್ರಿಟೀಷರು ಮತ್ತು ಭಾರತೀಯ ಬುದ್ಧಿವಂತ ಯುವಕರ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸಲು ಆರಂಭವಾದದ್ದೇ ಕಾಂಗ್ರೆಸ್. ಅದರಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಇದ್ದರು. ದೇಶದಲ್ಲಿ ಉತ್ತಮ ವಾತಾವರಣ ಕಲ್ಪಿಸಲು ಚಿಂತಕರ ವೇದಿಕೆ ಯನ್ನು ಕಾಂಗ್ರೆಸ್ ನಿರ್ಮಿಸಿತು ಎಂದರು.



1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಮಹಾತ್ಮ ಗಾಂಧೀಜಿ ಚಂಪಾರಣ್ಯ, ಕೇರಳ ಸತ್ಯಾಗ್ರಹ ಮಾಡಿದ ಮೇಲೆ ಸಾಕಷ್ಟು ಜನರು ಕಾಂಗ್ರೆಸ್ ತತ್ವ ಸಿದ್ಧಾಂತಗಳನ್ನು ಒಪ್ಪಿ ಸದಸ್ಯತ್ವ ಪಡೆದರು. ಆದರೆ, ಗಾಂಧೀಜಿಯವರ ಅಹಿಂಸಾ ಚಳವಳಿಗೆ ಬಾಲಗಂಗಾಧರನಾಥ ತಿಲಕ ಸೇರಿ ಅನೇಕರು ವಿರೋಧಿಸಿದರು. ಸಾಕಷ್ಟು ಪ್ರತಿರೋಧ ಬಂದರೂ ಗಾಂಧೀಜಿ ಅವರು ಅಹಿಂಸೆ, ಶಾಂತಿ ಮೂಲಕವೇ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಇಂತಹ ಮಹಾನ್ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷದ ಸದಸ್ಯರಾಗಿರುವುದು ನಮ್ಮೆಲ್ಲರ ಪುಣ್ಯವೆಂದರು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು ದಾಸರಕೊಪ್ಪಲು, ಕಾರ್ಮಿಕ ವಿಭಾಗ ಅಧ್ಯಕ್ಷ ಹೇಮಂತ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಕಾರ್ಯದರ್ಶಿ ರವಿ ಕಿರಣ್, ಖಯೂಂ, ಹೇಮಂತ್ ಇದ್ದರು.

## ಮಕ್ಕಳಿಗೆ ಭಗವದ್ಗೀತೆ ಬೋಧನೆಯ ಅವಶ್ಯಕತೆ ಇದೆ

### ಬ್ರಾಹ್ಮಣ ಸಭಾದಿಂದ ನಡೆದ ವಿಶ್ವ ಹಿತ ಚಿಂತಕರ ಸಮಾವೇಶದಲ್ಲಿ ಅಶೋಕ್ ಹಾರನಹಳ್ಳಿ

• ಪ್ರಜೋದಯ ವರದಿ

**ಹಾಸನ:** ಎಲ್ಲರಿಗೂ ಒಳಿತು ಬಯಸುವ, ಮನುಷ್ಯನ ಸ್ವಭಾವಗಳನ್ನು ವಿಶ್ಲೇಷಿಸುವ ಶ್ರೇಷ್ಠ ಗ್ರಂಥ ಭಗವದ್ಗೀತೆಯನ್ನು ಮಕ್ಕಳಿಗೆ ಬೋಧಿಸುವುದು ಸದ್ಯದ ಅವಶ್ಯಕತೆ ಇದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಿಕಟಪೂರ್ವ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಕಾಲೇಜು ಮಹಾವಿದ್ಯಾಲಯ ಆವರಣದಲ್ಲಿ ಜಿಲ್ಲಾ ಬ್ರಾಹ್ಮಣ ಸಭಾದಿಂದ ಹಮ್ಮಿಕೊಂಡಿದ್ದ ದ್ವಿತೀಯ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಹಾಗು ವಿಶ್ವ ಹಿತ ಚಿಂತಕರ ಸಮಾವೇಶದ ಎರಡನೇ ದಿನವಾದ ಭಾನುವಾರ ಕೌಟುಂಬಿಕ ಸವಾಲುಗಳು ಮತ್ತು ಪರಿಹಾರ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, ಭಗವದ್ಗೀತೆ ಯಾರಿಗೂ ಕೇಡು ಬಯಸುವುದಿಲ್ಲ. ಅದರ ಅರಿವಿದ್ದರೂ ಬೇರೆ ಯಾವುದೋ



ಕಾರಣಕ್ಕೆ ಅದನ್ನು ವಿರೋಧಿಸುತ್ತಾರೆಂದು ಅಭಿಪ್ರಾಯಪಟ್ಟರು.

ನಮ್ಮ ಋಷಿ ಪರಂಪರೆ ಮತ್ತು ಧರ್ಮದ ಆಚರಣೆಯಲ್ಲೇ ಸಮುದಾಯದ ರಕ್ಷಣೆ ಇದೆ. ನಾವು ಧರ್ಮ ಭ್ರಷ್ಟರಾಗದೆ, ಮೌಲ್ಯಯುತ ಜೀವನ ನಡೆಸಿದಾಗ ಸಮಾಜದಲ್ಲಿ ಗೌರವ ಸಿಗಲು ಸಾಧ್ಯ. ಜೀವನ ಸಾಗಿಸುವ ಕ್ರಮವನ್ನು ನಮ್ಮ ಉಪನಿಷತ್ ಹಾಗು ಭಗವದ್ಗೀತೆ ಅದ್ಭುತವಾಗಿ ವಿವರಿಸಿದೆ. ಭಗವದ್ಗೀತೆಯು ಮನುಷ್ಯ ಸ್ವಭಾವದ ಆಳವಾದ ವಿಶ್ಲೇಷಣೆ ಮಾಡುವುದರ ಜೊತೆಗೆ ಸಂಕಷ್ಟದ ಸಮಯದಲ್ಲಿ ಜೀವನವನ್ನು ಎದುರಿಸುವ ಶಕ್ತಿಯನ್ನು ನೀಡುತ್ತದೆ. ಇಂತಹ ಮೌಲ್ಯಗಳನ್ನು ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವುದರಲ್ಲಿ ಯಾವುದೇ ತಪ್ಪಿಲ್ಲವೆಂದರು.

ಇತ್ತೀಚಿನ ದಿನಗಳಲ್ಲಿ ಕೌಟುಂಬಿಕ ವ್ಯವಸ್ಥೆಗಳು ತೀರಾ ಹದಗೆಡುತ್ತಿವೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮದುವೆಯಾಗುವ ನವ ದಂಪತಿ ಮೂರು ತಿಂಗಳಿಗೆ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ. ಹಾಗಾದರೆ ನಮ್ಮ ಧರ್ಮ ಏನು ಹೇಳಿಕೊಡುತ್ತದೆಂಬುದರ ಬಗ್ಗೆ ಸಂಶಯ ಹುಟ್ಟುತ್ತದೆ. ಈ ರೀತಿಯಾಗಲು ಸಂಸ್ಕಾರ ಇಲ್ಲದಿರುವುದೇ ಕಾರಣ. ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಯತ್ನಿಸದಿದ್ದರೆ ಬದುಕು ಜಟಿಲವಾಗುತ್ತಲೇ ಇರುತ್ತದೆ. ಸಾಮಾಜಿಕ ಜಾಲತಾಣ ಗಳು ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದ್ದು, ಅವುಗಳ ಮೇಲೆ ನಿಯಂತ್ರಣ ಸಾಧಿಸುವ ಅನಿವಾರ್ಯತೆ ಇದೆ ಎಂದರು.

ಪೂರ್ವಜರು ಮಾಡಿದ ಸತ್ಕಾರ್ಯದಿಂದ ನಾವು ನೆಮ್ಮದಿಯ ಬದುಕು ಕಂಡಿದ್ದೇವೆ. ಧರ್ಮ ಪರಿಪಾಲನೆ ಮಾಡಿದರಷ್ಟೇ ನಮ್ಮ ಉಳಿವು ಎಂಬ ಸತ್ಯ ಗೊತ್ತಾಗಬೇಕು. ಸತ್ಕಾರ್ಯ, ಸದ್ವಿಚಾರ ಜೀವನವನ್ನು ಒಳ್ಳೆದ ದಾರಿಯತ್ತ ಕರೆದೊಯ್ಯುತ್ತವೆ ಎಂದು ಹೇಳಿದರು.

**ಸಮತೋಲನವೇ ಜೀವನ ಕಲೆ**

ಗೋಷ್ಠಿಯ ವಿಚಾರ ಮಂಡಿಸಿದ ಡಾ.ಶುಭಾ ಮಧುಸೂದನ್ ಅವರು, ಬುದ್ಧಿವಂತಿಕೆ ಹೆಚ್ಚಾದಂತೆ ಅಹಂಕಾರ ಮತ್ತು ಖಿನ್ನತೆ ಮನೆ ಮಾಡುವ ಸಾಧ್ಯತೆಗಳಿರುತ್ತವೆ. ಅದನ್ನು ಸಮತೋಲನದಲ್ಲಿ ಇಟ್ಟುಕೊಳುವುದೇ ಜೀವನದ ಕಲೆ. ಪೋಷಕರು ಹದಿಹರೆಯದ ಮಕ್ಕಳಿಗೆ ಪ್ರಶ್ನೆ ಕೇಳಲು ಮುಕ್ತ ಅವಕಾಶ ನೀಡಬೇಕು ಮತ್ತು ಗಂಡು ಮಕ್ಕಳನ್ನು ಅತಿಯಾದ ವಿಧೇಯರನ್ನಾಗಿ ಬೆಳೆಸದೆ ಅವರಿಗೆ

» ನಾಲ್ಕನೇ ಪುಟದಿಂದ

## ಸಿನಿಮಾ ಕ್ಷೇತ್ರದಿಂದ ಬ್ರಾಹ್ಮಣರ ಕೊಡುಗೆ ತೆರೆ ಮರೆಗೆ

• ಪ್ರಜೋದಯ ವರದಿ

**ಹಾಸನ:** ಸಿನಿಮಾ ರಂಗದಲ್ಲಿ ಬ್ರಾಹ್ಮಣರ ಕೊಡುಗೆಗಳು ಸರಿಯಾಗಿ ದಾಖಲಾಗದೆ ಇತಿಹಾಸದ ಪುಟಗಳಿಂದ ಮರೆಯಾಗುತ್ತಿವೆ ಎಂದು ಚಲನಚಿತ್ರ ವಿಮರ್ಶಕ ಎನ್.ಎಸ್. ಶ್ರೀಧರಮೂರ್ತಿ ಅವರು ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಆವರಣದಲ್ಲಿ ಜಿಲ್ಲಾ ಬ್ರಾಹ್ಮಣ ಸಭಾದಿಂದ ಹಮ್ಮಿಕೊಂಡಿದ್ದ ದ್ವಿತೀಯ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಹಾಗು ವಿಶ್ವ ಹಿತ ಚಿಂತಕರ ಸಮಾವೇಶದಲ್ಲಿ ಭಾನುವಾರ ಚಲನಚಿತ್ರ, ರಂಗಭೂಮಿಗೆ ವಿಪ್ರರ ಕೊಡುಗೆ ಮತ್ತು ಭವಿಷ್ಯತ್ತಿನಲ್ಲಿ ಅವಕಾಶಗಳು ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡದ



ಮೊದಲ ವಾಕ್‌ಚಿತ್ರ ಸತಿ ಸುಲೋಚನಾ ನಿರ್ಮಾಣಕ್ಕೆ ನಾಗೇಂದ್ರ ರಾವ್ ಅಡಿಪಾಯ ಹಾಕಿದರು. 1930ರ ದಶಕದಲ್ಲಿ ಬಾಲಿವುಡ್ ಪ್ರವರ್ಧಮಾನದಲ್ಲಿತ್ತಾದರೂ ಕನ್ನಡ ಸಿನಿಮಾ ರಂಗಕ್ಕೆ ಮಾರುಕಟ್ಟೆ ಇಲ್ಲದ್ದರಿಂದ ಸ್ಥಳೀಯವಾಗಿ ಯಾವ ಚಿತ್ರಗಳು ಸೆಟ್ಟೇರುತ್ತಿರಲಿಲ್ಲ. ನಾಗೇಂದ್ರ ರಾವ್ ಅವರು ಹಿಂದಿ ಚಲನಚಿತ್ರಗಳಲ್ಲಿ ಭರವಸೆಯ ಖಳನಟನಾಗಿ ಖ್ಯಾತಿ ಗಳಿಸಿದ್ದರು. ಕನ್ನಡದ ವರಾಗಿದ್ದ ಅವರಿಗೆ ಮಾತೃಭಾಷೆಯಲ್ಲಿ ಸಿನಿಮಾ ಮಾಡಬೇಕೆಂಬ ಆಸೆ ಹುಟ್ಟಿತ್ತು. ಆದರೆ, ಬಂಡವಾಳ ಹೂಡಲು ಯಾರೂ ಮುಂದೆ ಬರಲಿಲ್ಲ. ಮುಂಬೈಯಿಂದ ನೇರವಾಗಿ ಮೈಸೂರು ಅರಮನೆಗೆ ಬಂದ ಅವರು ಮಹಾರಾಜರ ಬಳಿ ಹಣ ಸಂಗ್ರಹಿಸಿದರು. ನಂತರ ಕುಪ್ಪಳ್ಳಿ ರೇಷ್ಮೆ ವ್ಯಾಪಾರಿಗಳಿಂದ ಆರ್ಥಿಕ ಸಹಾಯ ಪಡೆದರು, ಸೇಲಂನ ಎಣ್ಣೆ ವ್ಯಾಪಾರಿಗಳ ಬಳಿಯೂ ಅಂಗಲಾಚಿದರು. ಕನ್ನಡದಲ್ಲಿ ಸಿನಿಮಾ ಮಾಡಲೇಬೇಕೆಂದು ಅವರಿವರ ಬಳಿ ಸಂಗ್ರಹಿಸಿದ ಒಟ್ಟು ಹಣ 15 ಸಾವಿರ ರೂ. ಆಗಿತ್ತು. ಅಷ್ಟು ಕಡಿಮೆ ಹಣಕ್ಕೆ ಸಿನಿಮಾ ಆಗುವುದಿಲ್ಲವೆನ್ನುವುದು ಗೊತ್ತಾದಾಗ ಚಮ್ಮನ್ ಲಾಲ್ ಡುಂಗಾರೆ ಅವರು 25 ಸಾವಿರ ರೂ. ಬಂಡವಾಳ ಹೂಡಿ ಕನ್ನಡದ ಮೊದಲ ವಾಕ್‌ಚಿತ್ರ ನಿರ್ಮಿಸಿದರು. ಆದರೆ, ಸಿನಿಮಾ ನಿರ್ಮಾಪಕರ ಪಟ್ಟಿಯಲ್ಲಿ ನಾಗೇಂದ್ರ ರಾವ್‌ಗೆ ಸ್ಥಾನ ಸಿಗಲೇ ಇಲ್ಲ. ಹೀಗೆ ಅನೇಕ ಕಡೆಗಳಲ್ಲಿ ಚಲನಚಿತ್ರ ರಂಗದಲ್ಲಿ ಬ್ರಾಹ್ಮಣರನ್ನು ಮೂಲೆಗೆ ತಳ್ಳಿದ್ದಾರೆ. ಎಷ್ಟೋ ಮೊದಲುಗಳಿಗೆ ಬ್ರಾಹ್ಮಣರೇ ಕಾರಣರಾಗಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಬ್ರಾಹ್ಮಣರದ್ದು ಬರೆದ ಇತಿಹಾಸ

» ನಾಲ್ಕನೇ ಪುಟದಲ್ಲಿ

## ಡ್ರಗ್ಸ್ ದಂಧೆಗೆ ಕಡಿವಾಣ ಹಾಕುವಲ್ಲಿ ರಾಜ್ಯ ಸರ್ಕಾರ ವಿಫಲ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಸರ್ಕಾರ ಡ್ರಗ್ಸ್ ದಂಧೆಗೆ ಕಡಿವಾಣ ಹಾಕುವಲ್ಲಿ ಸಂಪೂರ್ಣ ವಿಫಲವಾಗಿದ್ದು, ರಾಜ್ಯದ ಯುವಕರ ಭವಿಷ್ಯದ ಜತೆ ಚೆಲ್ಲಾಟವಾಡುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಈ ಕುರಿತು ಎಕ್ಸ್ ಮಾಡಿರುವ ಅವರು, ಬೆಳಗಾವಿ ಅಧಿವೇಶನದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಡ್ರಗ್ಸ್ ದಂಧೆ ಎಲ್ಲಾ ರಾಜ್ಯಗಳಲ್ಲೂ ಇದೆ ಎಂದು ಗೃಹ ಸಚಿವರಾದ ಜಿ.ಪರಮೇಶ್ವರ ಅವರು ಉಡಾಫೆ ಉತ್ತರ ಕೊಟ್ಟಿದ್ದರೆಂದು ಟೀಕಿಸಿದ್ದಾರೆ.

## ಕೋಗಿಲು ಬಡಾವಣೆ ನಿವಾಸಿಗಳ ಸ್ಥಳಾಂತರಕ್ಕೆ ಖಂಡನೆ

• ಪ್ರಜೋದಯ ವರದಿ

**ಸಕಲೇಶಪುರ:** ಬೆಂಗಳೂರಿನ ಯಲಹಂಕ ಕೋಗಿಲು ಬಡಾವಣೆಯಲ್ಲಿ ನಡೆದ ಮನೆಗಳ ತೆರವು ಕಾರ್ಯಾಚರಣೆಯನ್ನು ಖಂಡಿಸಿ ಎಸ್‌ಡಿಪಿಐ ಕಾರ್ಯಕರ್ತರು ಪಟ್ಟಣದ ಹಳೆ ಬಸ್ ನಿಲ್ದಾಣ ಎದುರು ಭಾನುವಾರ ಪ್ರತಿಭಟನೆ ನಡೆಸಿದರು.

ಪಕ್ಷದ ಜಿಲ್ಲಾಧ್ಯಕ್ಷ ಇಮ್ರಾನ್ ಅರೇಹಳ್ಳಿ ಅವರು ಮಾತನಾಡಿ, ನಿರಾಶ್ರಿತರಿಗೆ ತಕ್ಷಣವೇ ಪುನರ್ವಸತಿ ಕಲ್ಪಿಸಿ ಮೂಲಸೌಕರ್ಯಗಳನ್ನು ಒದಗಿಸಬೇಕು. ಈ ಧ್ವಂಸ ಕಾರ್ಯಾಚರಣೆಯಲ್ಲಿ 300ಕ್ಕೂ ಹೆಚ್ಚು ಮನೆಗಳು ನಾಶವಾಗಿದ್ದು, 350ಕ್ಕೂ ಹೆಚ್ಚು ಕುಟುಂಬಗಳು (ಹೆಚ್ಚಿನವು ಮುಸ್ಲಿಂ ಫಕೀರ್ ಸಮುದಾಯದವರು) ನಿರಾಶ್ರಿತರಾಗಿದ್ದಾರೆ. ಆಡಳಿತ ಪಕ್ಷದಲ್ಲಿರುವ ಉನ್ನತ ನಾಯಕರು ನಿವಾಸಿಗಳನ್ನು ಅಕ್ರಮ ವಲಸಿಗರೆಂದು ಕರೆದು ಮಾನವೀಯತೆ ಮರೆತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.




ಆಡಳಿತಕ್ಕೆ ಬರುವಾಗ ಮುಸ್ಲಿಮರ ಮತಗಳನ್ನು ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಇದೀಗ ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದ್ದು, ಉತ್ತರ ಭಾರತದ ಬುಲ್ಡೋಜರ್ ನ್ಯಾಯ ಮಾದರಿ ಅನುಸರಿಸುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳ ತೆರವು ರಾಜಕಾರಣ ಒಂದೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ಪರಿಣಾಮವಾಗಿ ಮುಖ್ಯಮಂತ್ರಿ ಸಂತ್ರಸ್ತರಿಗೆ ಪರ್ಯಾಯ ಭೂಮಿ ನೀಡುವ ಭರವಸೆ ನೀಡಿದ್ದಾರೆ. ಆದರೆ ಸರ್ಕಾರ ಕೇವಲ ಹೇಳಿಕೆಯಾಗಿ ಬಿಡದೆ ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯಿಸಿದರು. ಮುಖಂಡರಾದ ವಾಜಿದ್ ಹೈದರ್ ಇತರರಿದ್ದರು.

## ಪ್ರತ್ಯೇಕ ಪ್ರಕರಣ: ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಅರಸೀಕೆರೆ ತಾಲ್ಲೂಕಿನ ಬಾಣಾವರ ಹಾಗು ಸಕಲೇಶಪುರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ 6.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿದೆ.

ಸಕಲೇಶಪುರ ತಾಲ್ಲೂಕು ಕಬ್ಬಿನಗದ್ದೆ ಗ್ರಾಮದ ನೇತ್ರಾ ಎಂಬುವವರ ಮನೆಯಲ್ಲಿ ಡಿ. 27ರಂದು ಹಾಡಹಗಲೇ 4.95 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು ಮಾಡಲಾಗಿದೆ. ಕಾಫಿ ತೋಟಕ್ಕೆ ಹಣ್ಣು ಕೊಯ್ಯಲು ಮನೆಗೆ ಬೀಗ ಹಾಕಿ ಕೀಯನ್ನು ಮನೆ ಹಿಂದಿನ ಬಾತ್ ರೂಂನಲ್ಲಿಟ್ಟು ತೆರಳಿದ್ದರು. ಮಧ್ಯಾಹ್ನ 1 ಗಂಟೆಗೆ ಊಟಕ್ಕೆ ಮನೆಗೆ ಬಂದಾಗ ಬೀರುವಿನ ಬಾಗಿಲು ತೆರೆದಿರುವುದು ಕಂಡು ಬಂದಿದೆ. 30 ಗ್ರಾಂ ತೂಕದ ಚಿನ್ನದ ಚೈನ್, 5 ಗ್ರಾಂ ತೂಕದ ಚಿನ್ನದ ಉಂಗುರ, 5 ಗ್ರಾಂ ಚಿನ್ನದ ಮಾಟಿ, 6 ಗ್ರಾಂ ಚಿನ್ನದ ಓಲೆ, 4 ಗ್ರಾಂ ಚಿನ್ನದ ಹ್ಯಾಂಗಿಂಗ್ ಹಾಗು 31 ಗ್ರಾಂ ತೂಕ ದ ಚಿನ್ನದ ಬಳೆ, 12 ಗ್ರಾಂ ಚಿನ್ನದ ಚೈನ್, 15 ಗ್ರಾಂ ತೂಕದ ಚಿನ್ನದ ಚೈನ್, 4 ಗ್ರಾಂ ಚಿನ್ನದ ಉಂಗುರ ಹಾಗು 30 ಸಾವಿರ ರೂ.ಗಳನ್ನು ಕಳವು ಮಾಡಲಾಗಿದೆ.

ದೇವರ ಕೋಣೆಯ ಹೆಂಚು ತೆಗೆದು ಒಳನುಗ್ಗಿರುವ ಕಳ್ಳರು ಅದೇ ದಾರಿಯಲ್ಲಿ ವಾಪಾಸ್ಸಾಗಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 1.45 ಲಕ್ಷ ರೂ. ಬೆಲೆಯ ಚಿನ್ನಾಭರಣ ಕದ್ದಿರುವ ಘಟನೆ ಬಾಣಾವರದ ದೇವನೂರು ರಸ್ತೆಯ ಕೆ.ಆರ್.ಶಿವಕುಮಾರ್ ಎಂಬುವವರ ಮನೆಯಲ್ಲಿ ನಡೆದಿದೆ. ಡಿ 25 ರಂದು ಕುಟುಂಬ ಸಮೇತ ಮಂತ್ರಾಲಯಕ್ಕೆ ತೆರಳಿದ್ದರು. ಮಾರನೇ ದಿನ ವಾಪಾಸ್ ಬಂದಾಗ ಕಾಂಪೌಂಡ್ ಗೇಟ್ ತೆರೆದಿರುವುದನ್ನು ಕಂಡು ಸಂಶಯದಿಂದ ಒಳ ಬಂದಾಗ ಬಾಗಿಲ ಬೀಗ ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿಟ್ಟಿದ್ದ 14 ಗ್ರಾಂ ತೂಕದ ಚಿನ್ನದ ಬಳೆ, 12 ಚಿನ್ನದ ಬ್ರಾಸ್ಲೈಟ್, 2 ಗ್ರಾಂ ಚಿನ್ನದ ಓಲೆ, 3 ಗ್ರಾಂ ಚಿನ್ನದ ಪೆಂಡೆಂಟ್ ಕಳವು ಮಾಡಿದ್ದಾರೆ.

### ಮಲೆನಾಡು ಭಾಗದ ರೆಸಾರ್ಟ್, ಹೋಂ ಸ್ಟೇಗಳಿಗೆ ಭಾರೀ ಬೇಡಿಕೆ | ಪೊಲೀಸರಿಂದ ಭದ್ರತಾ ಕ್ರಮ

# ಹೊಸ ವರ್ಷಾಚರಣೆಗೆ ಜಿಲ್ಲೆಗೆ ಪ್ರವಾಸಿಗರ ದಂಡು

• ಪ್ರಜೋದಯ ವರದಿ

**ಹಾಸನ:** ನೂತನ ಕ್ಯಾಲೆಂಡರ್ ವರ್ಷದ ಆರಂಭಕ್ಕೆ ಜನರು ಸಜ್ಜಾಗಿದ್ದು, ಪ್ರವಾಸಿ ತಾಣಗಳಲ್ಲಿ ಜನಜಂಗುಳಿ ಹೆಚ್ಚಾಗಿರುವುದು ಒಂದೆಡೆಯಾದರೆ ಮತ್ತೊಂದೆಡೆ ಹೋಂ ಸ್ಟೇ, ರೆಸಾರ್ಟ್‌ಗಳು ವಾರದ ಮೊದಲೇ ಬುಕ್ ಆಗಿವೆ.

ಕಳೆದ ವರ್ಷದ ಅನುಭವಗಳನ್ನು ನೆನಪಿಸಿಕೊಂಡು, ಮುಂದಿನ ದಿನಗಳತ್ತ ನಂಬಿಕೆ ಹಾಗು ಉತ್ಸಾಹದಿಂದ ಹೆಜ್ಜೆ ಇಡುವ ಈ ಸಂದರ್ಭದಲ್ಲಿ ಸಂಭ್ರಮ, ಸಂತೋಷ ಮತ್ತು ಸಮಾಧಾನದ ವಾತಾವರಣ ಎಲ್ಲೆಡೆ ಮನೆ ಮಾಡಿದೆ. ಹೊಸ ವರ್ಷಾರಂಭವು ಪ್ರತಿಯೊಬ್ಬರ ಮನಸ್ಸಿನಲ್ಲಿ ಉಲ್ಲಾಸವನ್ನು ತುಂಬಿ, ಉತ್ತಮ ಭವಿಷ್ಯದತ್ತ ಸಾಗಲು ಪ್ರೇರಣೆ ನೀಡುತ್ತದೆ. ಆದರೆ, ಅದೇ ಸಂಭ್ರಮ ಕೆಲವು ಬಾರಿ ಸೂತಕವನ್ನು ಕರುಣಿಸುತ್ತದೆ. ಹೊಸ ವರ್ಷಾರಂಭದಲ್ಲೇ ಅನಾಹುತಗಳು ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ. ಹೀಗಾಗಿ ಜಿಲ್ಲಾ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಂಡಿದ್ದು, ಪ್ರವಾಸಿ ತಾಣಗಳಲ್ಲಿ ಹೆಚ್ಚಿನ ಬಿಗಿ ಭದ್ರತೆ ವಹಿಸಿದೆ. ನಗರ ಪ್ರದೇಶಗಳಲ್ಲಿ ಕಳೆದ ಒಂದು ವಾರದಿಂದ ಡ್ರಿಂಕ್ ಅಂಡ್ ಡ್ರೈವ್, ದ್ವಿಚಕ್ರ ವಾಹನ ಸವಾರರ ಹೆಲ್ಮೆಟ್ ತಪಾಸಣೆ ಚುರುಕಾಗಿ ನಡೆಯುತ್ತಿದೆ.

**ಚೆಕ್ ಪೋಸ್ಟ್‌ಗಳಲ್ಲಿ ಬಿಗಿ ಭದ್ರತೆ**

ಮಲೆನಾಡು ಭಾಗವಾದ ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕು ವ್ಯಾಪ್ತಿಯ ಹೋಂ ಸ್ಟೇ, ರೆಸಾರ್ಟ್‌ಗಳಿಗೆ ವರ್ಷಾರಂಭದ ಸಂಭ್ರಮಕ್ಕೆ ಬೆಂಗಳೂರು, ಮಂಗಳೂರು ಕಡೆಯಿಂದ ಜನರು ದಾಂಗುಡಿ ಇಡುತ್ತಿದ್ದಾರೆ. ಪಶ್ಚಿಮ ಘಟ್ಟದ ಸುಂದರ ವಾತಾವರಣ ಆಸ್ವಾದನೆಗೆ ಬರುತ್ತಿರುವವರ ಸಂಖ್ಯೆ ಹೆಚ್ಚಿದೆ. ಡಿ.25 ರಿಂದ ಸರಣಿ ಸರ್ಕಾರಿ ರಜೆಗಳು ಇರುವುದರಿಂದ ಪ್ರವಾಸಿಗರ ಸಂಖ್ಯೆ ಹಿಂದೆಂದಿಗಿಂತ ಹೆಚ್ಚಾಗಿದೆ. ಪೊಲೀಸ್ ಇಲಾಖೆ ಚೆಕ್ ಪೋಸ್ಟ್‌ಗಳಲ್ಲಿ ಭದ್ರತೆ ಹಾಗು ತಪಾಸಣೆ ಹೆಚ್ಚಿಸಿದೆ. ನಗರ ಹಾಗು ಪಟ್ಟಣ ಪ್ರದೇಶಗಳಲ್ಲಿ ಪೊಲೀಸ್ ಗಸ್ತು ಹೆಚ್ಚಿಸಲಾಗಿದೆ. ರಾತ್ರಿ 12ರ ವರೆಗೆ ಪೊಲೀಸರು ಸಿಟಿ ರೌಂಡ್ ಹಾಕುತ್ತಿದ್ದು



ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿ ಎಲ್ಲಾ ಅಧಿಕಾರಿ ಹಾಗು ಸಿಬ್ಬಂದಿ ರಾತ್ರಿ ಗಸ್ತು ಕೈಗೊಂಡಿದ್ದಾರೆ. ರಾತ್ರಿ 10ರ ಬಳಿಕ ಡಿಜೆ, ಆರ್ಕೆಸ್ಟ್ರಾ ಬಳಸದಂತೆ ರೆಸಾರ್ಟ್ ಹಾಗು ಹೋಂ ಸ್ಟೇ ಮಾಲೀಕರಿಗೆ ಈಗಾಗಲೇ ಸೂಚಿಸಲಾಗಿದೆ. ಈ ಸಂಬಂಧ ಸಭೆಗಳನ್ನು ನಡೆಸಲಾಗಿದೆ. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಪ್ಲಾಸ್ಟಿಕ್ ಬಳಕೆ ನಿಷೇಧ, ಶಬ್ದ ಮಾಲಿನ್ಯ ತಡೆ ಮತ್ತು ಅರಣ್ಯ ಪ್ರದೇಶಗಳಲ್ಲಿ ಅತಿಕ್ರಮಣ ತಪ್ಪಿಸಲು ನಿರ್ದೇಶಕನ ನೀಡಲಾಗಿದೆ.


**ಪ್ರವಾಸಿ ತಾಣಗಳಲ್ಲಿ ಜನಜಂಗುಳಿ**

ಮಲೆನಾಡು ಭಾಗದಲ್ಲಿರುವ ಹಸಿರು ಕಾಡು, ಬೆಟ್ಟಗುಡ್ಡ, ಜಲಪಾತ ಹಾಗು ತಂಪಾದ ಹವಾಮಾನ ಅರಸಿ ಜನರು ಬರುತ್ತಿದ್ದಾರೆ. ಯಗಚಿ ಜಲಾಶಯ, ಮಂಜರಾಬಾದ್ ಕೋಟೆ, ಬಿಸಿಲೆ ಘಾಟ್, ಕೆಂಪುಹೊಳೆ ಅರಣ್ಯ ಪ್ರದೇಶ, ಕಾಫಿ ತೋಟಗಳ ನಡುವೆ ನಿರ್ಮಿಸಿರುವ ರೆಸಾರ್ಟ್‌ಗಳು ಹಾಗೂ ಗ್ರಾಮೀಣ ವಾತಾವರಣ ನೀಡುವ ಹೋಂ ಸ್ಟೇಗಳು ಪ್ರವಾಸಿಗರಿಗೆ ವಿಶೇಷ ಆಕರ್ಷಣೆಯಾಗಿವೆ. ಹೊಸ ವರ್ಷದ ಹಿನ್ನಲೆಯಲ್ಲಿ ಬೆಂಗಳೂರು ಸೇರಿ ನಗರ ಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಹಾಸನ ಜಿಲ್ಲೆಗೆ ಆಗಮಿಸುತ್ತಿದ್ದಾರೆ. ಈಗಾಗಲೇ ಹಲವು ರೆಸಾರ್ಟ್ ಹಾಗು ಹೋಂ ಸ್ಟೇಗಳಲ್ಲಿ ಬುಕ್ಕಿಂಗ್ ಬಹುತೇಕ ಭರ್ತಿಯಾಗಿದ್ದು, ಕೊನೆಯ ಕ್ಷಣದ ಬುಕ್ಕಿಂಗ್‌ಗಾಗಿ ಪ್ರವಾಸಿಗರು ಹರಸಾಹಸ ಪಡುತ್ತಿದ್ದಾರೆ. ಕುಟುಂಬ ಸಮೇತ ಬರುವವರು, ಯುವಕರ ತಂಡಗಳು ಹಾಗು ವಿದೇಶಿ ಪ್ರವಾಸಿಗರು ಕೂಡ ಹಾಸನ ಜಿಲ್ಲೆಯತ್ತ ಮುಖ ಮಾಡುತ್ತಿರುವುದು ಗಮನಾರ್ಹವಾಗಿದೆ.

**ಸ್ಥಳೀಯರಿಗೆ ಆರ್ಥಿಕ ಲಾಭ**

ಪ್ರವಾಸಿಗರ ಆಗಮನದಿಂದ ಸ್ಥಳೀಯರಿಗೆ ಆರ್ಥಿಕ ಲಾಭವೂ ಹೆಚ್ಚುತ್ತಿದೆ. ಹೋಂ ಸ್ಟೇ ನಿರ್ವಾಹಕರು, ಟ್ಯಾಕ್ಸಿ ಚಾಲಕರು, ಸ್ಥಳೀಯ ಮಾರ್ಗದರ್ಶಕರು, ಹೋಟೆಲ್ ಮತ್ತು ಸಣ್ಣ ವ್ಯಾಪಾರಿಗಳಿಗೆ ಹೊಸ ವರ್ಷದ ದಿನಗಳಲ್ಲಿ ಉತ್ತಮ ಆದಾಯ ಸಿಗುವ ನಿರೀಕ್ಷೆ ಇದೆ. ಅದರಿಂದ ಗ್ರಾಮೀಣ ಆರ್ಥಿಕತೆಗೆ ಸಹ ಬಲ ಸಿಗುತ್ತಿದೆ. ಒಟ್ಟಾರೆ, ಪ್ರಕೃತಿ ಸೌಂದರ್ಯ, ಐತಿಹಾಸಿಕ ತಾಣಗಳು ಮತ್ತು ಆತಿಥ್ಯ ಸಂಸ್ಕೃತಿಯೊಂದಿಗೆ ಹಾಸನ ಜಿಲ್ಲೆ ಹೊಸ ವರ್ಷಾಚರಣೆಗೆ ಪ್ರವಾಸಿಗರಿಗೆ ಆಕರ್ಷಕ ಸ್ಥಾನವಾಗಿ ಹೊರಹೊಮ್ಮಿದೆ.

# ಕುವೆಂಪು ಶತಮಾನದ ಭಾಗ್ಯ




**ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ**
**ಜನನ-29-12-1904 : ಮರಣ- 11-11-1994**

**ಕುವೆಂಪು ಅವರ ಪ್ರಮುಖ ಕೃತಿಗಳು**

ಶ್ರೀ ರಾಮಾಯಣ ದರ್ಶನಂ-ಮಹಾಕಾವ್ಯ, ಜ್ಞಾನಪೀಠ ಪ್ರಶಸ್ತಿ ಪಡೆದ ಕೃತಿ
ಕಾನೂರು ಹೆಗ್ಗಡತಿ-ಸಾಮಾಜಿಕ ಕಾದಂಬರಿ
ಮಲೆಗಳಲ್ಲಿ ಮದುಮಗಳು-ಪರ್ವತ ಪ್ರದೇಶದ ಕಥಾವಸ್ತುವಿನ ಮಹಾ ಕಾದಂಬರಿ

**ನಾಟಕಗಳು**

- ಬಿರುಗಾಳಿ
- ಮಹಾರಾತ್ರಿ
- ಸ್ಮಶಾನದ ಕುರುಕ್ಷೇತ್ರ
- ಜಲಗಾರ
- ರಕ್ತಾಕ್ಷಿ
- ಬೆರಳ್ಗೆ ಕೊರಳ್
- ಯಮನಾ ಸಾಲು
- ಚಂದ್ರಹಾಸ
- ಮನುಜಮತ ವಿಶ್ವಪಥ


**ಕಾವ್ಯ ಸಂಕಲನಗಳು**

- ಕೋಲು-ಕವಿತೆಗಳ ಸಂಕಲನ
- ಪಾಂಚಜನ್ಯ-ಕಾವ್ಯ ಸಂಕಲನ
- ನವಿಲು-ಕವಿತೆಗಳ ಸಂಕಲನ
- ಕಿಂದರಿ ಜೋಗಿ ಮತ್ತು ಇತರೆ ಕವನಗಳು
- ಶೂದ್ರ ತಪಸ್ವಿ-ಕವಿಗಳು/ಸಂಕಲನ
- ಕಿಂಕಣಿ
- ಅಗ್ನಿಹಂಸ-ಕಾವ್ಯ ಸಂಕಲನ
- ಚಂದ್ರಮಾನಚಕ್ಕೆ ಬಾ ಚಕೋರಿ
- ಇಕ್ಷುಗಂಗೋತ್ರಿ

**ಶೈಕ್ಷಣಿಕ ಮತ್ತು ಸಾಮಾಜಿಕ ಕೊಡುಗೆಗಳು**


ಮೈಸೂರು ವಿಶ್ವವಿದ್ಯಾಲಯದ ಕುಲಪತಿ (1956–1960)
ಕನ್ನಡ ಸಂಶೋಧನಾ ಸಂಸ್ಥೆ ಸ್ಥಾಪನೆ
ವಿಶ್ವಮಾನವ ಸಂದೇಶ ಹಾಗೂ ಜಾತಿ ವಿರೋಧಿ ಹೋರಾಟ
ಜೈ ಭಾರತ ಜನನಿಯ ತನುಜಾತೆ... ಎಂಬ ಕನ್ನಡ ನಾಡಗೀತೆಯ ರಚನೆ
ಕುವೆಂಪು ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯ ಮತ್ತು ಕುವೆಂಪು ಅಧ್ಯಯನ ಕೇಂದ್ರಗಳು ಸ್ಥಾಪನೆಗೊಂಡಿವೆ

**ಕುವೆಂಪು ಅವರು ಬ್ರಾಹ್ಮಣ ದ್ವೇಷಿಗಳು ಎಂದು ಕೆಲ ಗುಂಪುಗಳು ಪ್ರಚಾರ ಮಾಡುತ್ತಿದ್ದರು. ನನ್ನ ಪರಮ ಆರಾಧ್ಯ ಮೂರ್ತಿಯಾದ ಶ್ರೀ ರಾಮಕೃಷ್ಣ ಪರಮ ಹಂಸರು ಜನ್ಮತಃ ಬ್ರಾಹ್ಮಣರು ನನ್ನ ದೀಕ್ಷಾ ಗುರುಗಳೂ ಪರಮ ಹಂಸರ ನೇರ ಶಿಷ್ಯರೂ ಆದ ಸ್ವಾಮಿ ಶಿವಾನಂದರು ಬ್ರಾಹ್ಮಣರು. ನನ್ನ ಸಾಹಿತ್ಯಿಕ ಶ್ರೇಯಸ್ಸಿಗೆ ಕಾರಣರಾದ ಟಿ.ಎಸ್. ವೆಂಕಣ್ಣಯ್ಯನವರೂ ಎ.ಆರ್. ಕೃಷ್ಣಶಾಸ್ತ್ರಿಗಳೂ, ಬಿ.ಎಂ.ಶ್ರೀಯವರೂ ಬ್ರಾಹ್ಮಣರು ಇಷ್ಟು ಜನರಿಗೆ ಋಣಿಯಾಗಿರುವ ನಾನು ಬ್ರಹ್ಮ ದ್ವೇಷಿಯಾಗಿರಲು ಸಾಧ್ಯವೇ? ಎಂದು ಕುವೆಂಪು ಆ ಗುಂಪಿಗೆ ಉತ್ತರಿಸಿದರಂತೆ.**



**ಕುವೆಂಪು ಅವರಿಗೆ ಸಂದ ಗೌರವಗಳು**

1955- ಕೇಂದ್ರ ಸಾಹಿತ್ಯ ಅಕಾಡಮಿ
1968-ಜ್ಞಾನಪೀಠ ಪ್ರಶಸ್ತಿ
1964-ರಾಷ್ಟ್ರಕವಿ ಬಿರುದು
1988-ಪದ್ಮವಿಭೂಷಣ
1988-ಪಂಪ ಪ್ರಶಸ್ತಿ
1992-ಕರ್ನಾಟಕ ರತ್ನ


-ಡಾ.ಕೆ.ಜಿ.ಕವಿತ
ಪ್ರಾಂಶುಪಾಲರು
ಸ.ಮ.ಪ್ರ.ದ. ಕಾಲೇಜು,
ಹಾಸನ.

ಒಂದು ಶತಮಾನ ಕಾಲ ಕನ್ನಡ ಸಾಹಿತ್ಯ ಲೋಕದ ಸಾಕ್ಷಿ ಪ್ರಜ್ಞೆಯಾಗಿದ್ದವರು. ಕುಪ್ಪಳ್ಳಿಯ ಅವಿಭಕ್ತ ಕುಟುಂಬದಲ್ಲಿ ಜನಿಸಿ ಮನೆಯಲ್ಲೇ ಕ್ರಿಶ್ಚಿಯನ್ ಪಾದ್ರಿಗಳು ಮುಂದೆ ತೀರ್ಥಹಳ್ಳಿ, ಶಿವಮೊಗ್ಗಾ, ಮೈಸೂರು ಹೀಗೆ ನಾನಾ ಕಡೆ ವಿದ್ಯಾಭ್ಯಾಸ ಪಡೆದರು. ತಾವು ಓದಿದ ಮಹಾರಾಜ ಕಾಲೇಜಿನಲ್ಲೇ ಉಪನ್ಯಾಸಕರಾಗಿ ಮುಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲೇ ಉಪ ಕುಲಪತಿಗಳಾದರು. ತಮ್ಮ ವಿದ್ಯಾರ್ಥಿ ದೆಸೆಯಲ್ಲೆ ಬರವಣಿಗಯಲ್ಲಿ ತೊಡಗಿಸಿಕೊಂಡಿದ್ದರು. ಒಮ್ಮೆ ಮಹಾರಾಜ ಕಾಲೇಜಿನಲ್ಲಿ ಐರಿಷ್ ಕವಿ ಜೇಮ್ಸ್ ಹೆನ್ರಿ ಕಸಿನ್ಸ್ (1924) ಅವರನ್ನು ಕುವೆಂಪು ತಮ್ಮ ಕೃತಿ ಬಿಗಿನರ್ಸ್ ಮ್ಯೂಸ್ ಇಂಗ್ಲೀಷ್ ಕೃತಿಯನ್ನು ಕೊಟ್ಟು ಅಭಿಪ್ರಾಯವನ್ನು ಕೇಳಿದರು. ಕಸಿನ್ಸ್‌ರು ಕೃತಿಯನ್ನು ಓದಿ ಕುವೆಂಪು ಅವರನ್ನು ತಲೆಯಿಂದ ಕಾಲಿನವರೆಗೂ ದಿಟ್ಟಿಸಿ ನೋಡಿದರು. ಗಾಂಧೀ ಟೋಪಿಯಿಂದ ಎಲ್ಲಾ ಸ್ವದೇಶಿ ವಸ್ತುಗಳನ್ನೇ ಧರಿಸಿದ್ದ ಕುವೆಂಪು ಅವರಿಗೆ ಮೈ ಮೇಲೆ ಸ್ವದೇಶಿ ವಸ್ತುಗಳನ್ನು ಧರಿಸಿರುವ ನೀನು ನಿನ್ನ ಮಾತೃ ಭಾಷೆಯಲ್ಲೇ ಸಾಹಿತ್ಯವನ್ನು ರಚಿಸು. ಇಂಗ್ಲೀಷ್‌ನಲ್ಲಿ ಬರೆಯಲು ಇಂಗ್ಲೆಂಡ್‌ನವರಿದ್ದಾರೆ. ನಿನ್ನ ಭಾಷೆಯಲ್ಲಿ ಬರೆದರೆ ನಿನ್ನ ಸ್ವದೇಶಿ ಭಾಷೆಗೆ ಕೀರ್ತಿ ತರಬಹುದು. ರವೀಂದ್ರ ನಾಥ ಠಾಗೂರ್‌ನಂತೆ ಎಂದು ಮಾರ್ಗದರ್ಶನ ನೀಡಿದರು. ಮೊದಲಿಗೆ ಕುವೆಂಪು ಅವರು ಅಸಮಾಧಾನ ಪಟ್ಟುಕೊಂಡರೂ ನಂತರದಲ್ಲಿ ಕನ್ನಡ ಸಾಹಿತ್ಯದಲ್ಲಿ ರಚಿಸ ತೊಡಗಿದರು.

ಕನ್ನಡಕ್ಕೆ ಮೊದಲ ಜ್ಞಾನಪೀಠ, ಕನ್ನಡದ ಮೊದಲ ರಾಷ್ಟ್ರಕವಿ, ನಾಡಗೀತೆ ಕೊಟ್ಟವರು. ಕವಿ, ಲೇಖಕ, ಪ್ರಾಧ್ಯಾಪಕ, ಪ್ರಾಂಶುಪಾಲ, ಕುಲಪತಿ, ಅನೇಕಾನೇಕ ಪ್ರಶಸ್ತಿಗಳನ್ನು ಪಡೆದವರು. ರಸ ಋಷಿ, ಯುಗದ ರವಿ, ಜಗದ ಕವಿ ಎಂಬ ಬಿರುದಿಗೆ ಪಾತ್ರರಾದವರು. ಮಹಾನ್ ಮಾನವ ತಾವಾದಿ, ಮಂತ್ರ ಮಾಂಗಲ್ಯ ವಿವಾಹದ ಬೋಧಿಸುವಿಕೆ, ಸಪ್ತ ಪಥಗಳ ಬೋಧಿಸುವಿಕೆ ನಡೆ-ನುಡಿಗಳಲ್ಲಿ ಅಂತರವಿಲ್ಲದೆ ಬದುಕಿದವರು. ಹೀಗೆ ಅನೇಕಾನೇಕ ಆದರ್ಶ ಮೌಲ್ಯ ಗಳೊಂದಿಗೆ ಬದುಕಿದ ವಿಶ್ವ ಮಾನವನೇ ಕುವೆಂಪು.

ಐರಿಷ್ ಕವಿಯ ಆದರ್ಶದ ಬೋಧನೆಯಿಂದ ಕನ್ನಡಕ್ಕೆ ಸಿಕ್ಕ ಹಾಗು ದಕ್ಕಿದ ಕುವೆಂಪು ಅವರ ರಚನೆಗಳನ್ನು ಎಣಿಕೆ ರೂಪದಲ್ಲಿ ಹೀಗೆ ನೀಡಬಹುದು. ಆಧುನಿಕ ಮಹಾನ್ ಕಾವ್ಯ- ಶ್ರೀ ರಾಮಾಯಣ ದರ್ಶನಂ ನೂರಾರು ವರ್ಷಗಳ ಹಿಂದೆ ಮಲೆನಾಡಿನ ಜೀವನಾನುಭವ ಮಾದರಿಯಾಗಿಲ್ಲವಾದರೂ ಆ ಮೂಢನಂಬಿಕೆಗಳು ಹಾಗು ದಟ್ಟ ಅರಣ್ಯಾನುಭವಗಳು ಅವರ ಅದ್ಭುತವಾದ ಎರಡು ಕಾದಂಬರಿಗಳಿಗೆ, ಕವನಗಳಿಗೆ ಪ್ರೇರಣೆಯನ್ನು ನೀಡಿದವು. ಒಂದು ಮಹಾಕಾವ್ಯ, ಎರಡು ಬೃಹತ್ ಕಾದಂಬರಿಗಳು, 24-ಕವನ ಸಂಕಲನಗಳು, ಒಂದು ಖಂಡಕಾವ್ಯ, ಎರಡು ಕಥಾ ಸಂಕಲನ, 12 ನಾಟಕ ಸಂಕಲನಗಳು, ವಿಮರ್ಶಾ ಸಂಕಲನ-06, ಆತ್ಮಕಥೆ-02 ಸಂಪುಟ, ಜೀವನ ಚರಿತ್ರೆ-02, ಅನುವಾದ-02, ಭಾಷಣ ಲೇಖನಗಳು-05, ಶಿಶುಸಾಹಿತ್ಯ-09 ಇತ್ಯಾದಿಗಳು ಅವರ ಸಾಹಿತ್ಯನು ಸಂಧನಗಳಾಗಿವೆ.

ಕುವೆಂಪು ಅವರು ಮೇಲೆ ಸೂಚಿಸಿದ ಕೃತಿಗಳನ್ನು ರಚಿಸುವ ಅದೇ ಅವಧಿಯಲ್ಲಿ ತಂದೆಯಾಗಿ, ಪತಿಯಾಗಿ, ಪ್ರಾಧ್ಯಾಪಕರಾಗಿ ನಿಭಾಯಿಸುವಲ್ಲೂ ಯಶಸ್ವಿಯಾಗಿದ್ದರು. ಅವರ ಸಾಹಿತ್ಯ ರಚನೆಯ ಅಮೂಲ್ಯ ಸಮಯದಲ್ಲಿ ನೈತಿಕವಾಗಿ ಮಾದರಿಯಾಗಿದ್ದು ಘಟನೆಗಳು ಶ್ರೀ ಸಾಮಾನ್ಯನಿಗೆ (ಶ್ರೀ ಸಾಮಾನ್ಯ ಎಂಬ ಪದ ಕುವೆಂಪು ಅವರೇ ಸೃಷ್ಟಿಸಿದ್ದಾಗಿದೆ) ಬೋಧ ನಾರ್ಹವಾಗಿದೆ. ಕುವೆಂಪು ಅವರ ಸಾಹಿತ್ಯ ಸೃಷ್ಟಿ ಹಾಗು ಅವುಗಳ ಸೌಂದರ್ಯನುಭೂತಿ, ಉದ್ದೇಶ-ಗುರಿಗಳನ್ನು ನಾವು ಅವಲೋಕನ ಮಾಡುವುದು ಸಾಹಿತ್ಯಾಸಕ್ತರ ಸಹಜ ಧರ್ಮ ವಾಗಿದೆ. ಅದನ್ನು ಹೊರತುಪಡಿಸಿ ಅವರ ಬದುಕು-ಬರಹಗಳ ಸಾಮ್ಯತೆಗಳನ್ನು ಗಮನಸಿ ಜೀವಿಸೋಣ.

ದಾಂಪತ್ಯದ ಬದುಕನ್ನು ನಿರಾಕರಿಸಿದ್ದ ಕುವೆಂಪು ಮುಂದೆ ತಾನೇ ಹೆಸರಿಟ್ಟ ಮಾವನ ಮಗಳು ಹೇಮೆಯನ್ನು ತಮ್ಮ ಮೂವತ್ತರ ದಶಕದಲ್ಲಿ ವಿವಾಹವಾಗುತ್ತಾರೆ. ಶ್ರೀ ರಾಮಕೃಷ್ಣ ಪರಮ ಹಂಸ ಹಾಗು ಶಾರದಾ-ದೇವಿ ಅವರನ್ನು ತಮ್ಮ ಬದುಕಿನ ಆದರ್ಶವಾಗಿ ಪರಿಗಣಿಸಿದ್ದ ಕುವೆಂಪು ಅವರು ಹೇಮಾವತಿ ಅವರನ್ನು ಅಕ್ಷರಶಃ ಪೂಜಿಸುತ್ತಿದ್ದರು. ಗೃಹಿಣಿಯರನ್ನು ಮನೆ-ಮನೆಯ ತಪಸ್ವಿನಿಯರಿಗೆ ಹೋಲಿಸುತ್ತಾರೆ. ದಾಂಪತ್ಯವನ್ನು ದೈವಿಕ ದೃಷ್ಟಿಯಿಂದ ನೋಡುತ್ತಿದ್ದ ಕವಿಗಳು ಕವನವೊಂದರಲ್ಲಿ ನಿದ್ದೆಯಲ್ಲಿ ಕಂಡ ಕನಸೊಂದನ್ನು ತಿಳಿಸುತ್ತಾರೆ. ಸ್ವರ್ಗದ ಬಾಗಿಲ ಮುಂದೆ ನಿಂತಿರುವ ಕವಿ ಸ್ವರ್ಗದ ಬಾಗಿಲನ್ನು ತಟ್ಟುತ್ತಾರೆ. ತಮ್ಮ ಪರಿಚಯನ್ನು ತಮ್ಮ ಸ್ಥಾನ-ಮಾನ, ಅಧಿಕಾರ, ಹುದ್ದೆ, ಪ್ರಶಸ್ತಿ, ಬಿರುದು, ಬಾವಲಿ (ಕುಲಪತಿ, ಜ್ಞಾನಪೀಠ ಪ್ರಶಸ್ತಿ, ರಸಋಷಿ, ಪದ್ಮವಿಭೂಷಣ ಇತ್ಯಾದಿ)ಗಳನ್ನು ಉಲ್ಲೇಖಿಸಿದರೂ ಸ್ವರ್ಗದ ಬಾಗಿಲು ತೆರೆಯುವುದಿಲ್ಲ. ಹೇಮಿಯ ಗಂಡ ಎಂದು ಹೇಳಿದಾಕ್ಷಣ ಸ್ವರ್ಗ ದ್ವಾರ ತೆರೆಯಿತು ಎಂದು ಹೇಳುವಲ್ಲಿ ಅವರ ಬದುಕಿನಲ್ಲಿ ಹೇಮಾವತಿಯ ಪಾತ್ರದ ಮಹತ್ವ ಅರ್ಥವಾಗುತ್ತದೆ. ಹೇಮಾವತಿ ಅವರು ತೀರಿ ಹೋದ ನಂತರ 12 ವರ್ಷಗಳ ಕಾಲ ಬದುಕಿದ್ದ ಕುವೆಂಪು ಅವರು ತೀವ್ರ ಯಾತನೆಯನ್ನು ಅನುಭವಿಸಿದರು. ಆ ಹನ್ನೆರಡು ವರ್ಷಗಳ ಕಾಲ ಯಾವುದೇ ರೀತಿಯ ಸೃಜನಶೀಲ ಕಾರ್ಯ ಗಳೂ ಕುವೆಂಪು ಅವರಿಂದ ಸಾಧ್ಯವಾಗಲಿಲ್ಲ. ದೈವಾಧೀನರಾಗಿದ್ದ ಶ್ರೀಮತಿ ಹೇಮಾವತಿ ಅವರ ಕಾಲು ಮುಟ್ಟಿ ನಮಸ್ಕರಿಸಿ ಸರ್ವ ಮಂಗಲ ಮಾಂಗಲ್ಯೇ ಇತ್ಯಾದಿ ಮಂತ್ರಗಳನ್ನು ಪಠಿಸಿದ್ದರಂತೆ. ಶ್ರೀ ರಾಮಾಯಣ ದರ್ಶನಂ ಕೃತಿಯಲ್ಲಿನ ಮಂಥರೆಯ ಪಾತ್ರವನ್ನು ಉನ್ನತೀಕರಿಸಿರುವುದು, ಚಿತ್ರಾಂಗದಾ ಊರ್ಮಿಳಾ ಪಾತ್ರಗಳನ್ನು ವಿಸ್ತರಿಸಿರುವುದು, ಎಲ್ಲಾ ಮಹಿಳಾ ಪಾತ್ರಗಳನ್ನು ಗೌರವ ಪೂರ್ವಕವಾಗಿ ಚಿತ್ರಿಸಿರುವುದು ಅವರ ಮಹಿಳಾ ದೃಷ್ಟಿಕೋನಗಳನ್ನು ಸ್ಪಷ್ಟಪಡಿಸುತ್ತಿದೆ.

ಸಾಹಿತ್ಯ ಸೃಷ್ಟಿಸಲು ಏಕಾಗ್ರತೆ, ತನ್ಮಯತೆ, ಏಕಾಂತ, ಧ್ಯಾನಗಳ ಅನಿವಾರ್ಯತೆ ಇರುತ್ತದೆ. ಇದೇ ಕಾರಣಕ್ಕೆ ಹರಟೆ, ಜನ ಸಾಮಾನ್ಯರೊಡನೆ ಕಾಲ ಕಳೆಯುವುದು ಕುವುಂಪು ಅವರಿಗೆ ಇಷ್ಟ ವಾಗುತ್ತಿರಲಿಲ್ಲ. ಮಹಾಕಾವ್ಯವನ್ನು ರಚಿಸುವ ಸಂದರ್ಭದಲ್ಲಿ ಸಂಜೆ ಹೊತ್ತು ಕುಕ್ಕರಹಳ್ಳಿಯ ಏರಿ ಮೇಲೆ ವಾಯು-ವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ ಪರಿಚಿತರು ಯಾವ ಕಡೆಯಿಂದ ಬಂದಿರಿ ಎಂದು ಪ್ರಶ್ನಿದರೆ ಒಮ್ಮೆ ಕಿಷ್ಕಿಂದಾ ಕಡೆಯಿಂದ ಎಂತಲ್ಲೇ ಅಯೋಧ್ಯಾ ಕಡೆಯಿಂದ ಎಂದೋ ಉತ್ತರಿಸುತ್ತಿದ್ದರಂತೆ ಕೃತಿ ರಚನಾ ಸಂದರ್ಭದಲ್ಲಿ ಕೃತಿಯನ್ನೇ ಜೀವಿಸುತ್ತಿದ್ದವರು ಕುವೆಂಪು.

ಹೇಮಾವತಿ ಹಾಗು ಮಕ್ಕಳು ಊರಿಗೆ ಹೋಗಿ ಮೈಸೂರಿನ ಒಂಟಿಕೊಪ್ಪಲಿನ ಉದಯರವಿಗೆ ವಾಪಾಸಾದ ದಿನದಲ್ಲಿ ಒಂಟಿಕೊಪ್ಪಲಿನ ಪೊಲೀಸ್ ಠಾಣೆಯಿಂದ ಫೋನ್ ಕಾಲ್ ಬರುತ್ತದೆ ಕಳ್ಳನೊಬ್ಬ ನಿಮ್ಮ ಮನೆಯಿಂದ ಕದ್ದಿರುವ ಮಾಹಿತಿಗಳನ್ನು ನೀಡುತ್ತಿದ್ದಾನೆ ಹಾಗು ಸ್ಥಳ ವಿಚಾರ ಣೆಯ ಕಾರಣಕ್ಕೆ ಕಳ್ಳನೊಂದಿಗೆ ಉದಯ-ರವಿಗೆ ಬರುತ್ತಾರೆ. ಪೊಲೀಸ್ ಹಾಗು ಕಳ್ಳ ಮನೆಗೆ ಬಂದಾಗ ತಾವು ಯಾವಾಗಲೂ ಸಾಹಿತ್ಯ ರಚನೆ ಮಾಡುತ್ತಿದ್ದ ನಿರ್ದಿಷ್ಟ ಜಾಗದಲ್ಲಿ ಕುಳಿತು ಕುವೆಂಪು ಅವರು ಬರಹದಲ್ಲಿ ತಲ್ಲೀನರಾಗಿದ್ದರು. ಇವರೆಲ್ಲರ ಬಗೆಗೆ ಗಮನ ಕೊಡದೇ ಧ್ಯಾನಾಸಕ್ತರಂತೆ ಬರಹದೊಳಗೆ ತನ್ಮಯರಾಗಿದ್ದರು. ತಕ್ಷಣವೇ ಆ ಕಳ್ಳ ಹೌದು ಹೌದು ಇದೇ ಮನೆಯಿಂದಲೇ ಆವತ್ತು ದೇವರ ಸಾಮಾನುಗಳನ್ನು ಕದ್ದಿದ್ದು. ಕಳ್ಳತನ ಮಾಡಲು ಬಂದ ದಿವಸವೂ ಇವರು ಹೀಗೆ ಇಲ್ಲೇ ಕುಳಿತು ಬರೆಯುತ್ತಿದ್ದರು! ಎಂದನಂತೆ. ಕಳ್ಳನೊಬ್ಬ ಮನೆಗೆ ನುಗ್ಗಿ ಕಳ್ಳತನ ಮಾಡಿದರೂ ಅವರ ಬರಹದ ಮೇಲಿನ ಧ್ಯಾನ ಕೆಟ್ಟಿರಲಿಲ್ಲ. ಇದೇ ಬದುಕು-ಬರಹದೊಳಗಿನ ಅನನ್ಯತೆ.

ಅಂದಿನ ಮೈಸೂರಿನ ಅನೇಕ ಕಡೆಗಳಲ್ಲಿ (ಇಂದಿಗೂ ಅನೇಕ ಕಡೆ ಇದೇ ರೀತಿಯ ನಡವಳಿಕೆ ಚಾಲ್ತಿಯಲ್ಲಿದೆ). ಹಾಲು ಕೊಡುವ ಹಸು-ಕರುಗಳನ್ನು ಕೊಳ್ಳುವವರು ಮನೆ ಮುಂದೆ ತಂದು ಅವರ ಮುಂದೆ ಹಾಲು ಕರೆದು ಕೊಡುವ ಪದ್ಧತಿ ಇತ್ತು. ಒಮ್ಮೆ ಹಾಲು ಕರೆಯುವ ಹಸುವಿನೊಂದಿಗೆ ಬೊಂತೆಯ ಕರು ಸತ್ತು ಹೋಗಿರುವ ಸಂದರ್ಭದಲ್ಲಿ ಹಾಲು ಕರೆಯಲು ಸಾಧ್ಯವಾಗುವುದಿಲ್ಲ. ಕರುವಿನ ಪ್ರತಿಕೃತಿ ಮಾಡಿ ಹುಲ್ಲು ತುಂಬಿಸುವ ಬೊಂತೆಯನ್ನು ಬೊಂತೆ ಎನ್ನುತ್ತಾರೆ. ಕರುವನ್ನು ತಂದು ಬೊಂತೆ ಕರುವನ್ನು ಹಸುವಿನ ಮುಂದಿಟ್ಟು ಹಾಲು ಕರೆದು ಹಾಲು ಮಾರಿದ ದೃಶ್ಯ ಕವಿಗಳ ಗಮನಕ್ಕೆ ಬರುತ್ತದೆ. ಅವರು ತಕ್ಷಣವೇ ಅಲ್ಲಿಗೆ ಬಂದು ನಾಳೆಯಿಂದ ಹಾಲು ಮಾರಲು ಬರಬೇಡಿ ಎಂದು ಹಾಲಮ್ಮನಿಗೆ ಹೇಳುವುದರೊಂದಿಗೆ ಪತ್ನಿ ಹೇಮಾವತಿ ಹಾಗು ಆ ದೃಶ್ಯವನ್ನು ಗಮನಿಸುತ್ತಿದ್ದ ತಮ್ಮ ಮಕ್ಕಳಿಗೆ ನೋವಿನಿಂದ ಬುದ್ಧಿ ಹೇಳುತ್ತಾರೆ. ಹಾಲು ಮಾರುವವರಿಗೆ ತಿಳುವಳಿಗೆ ಇಲ್ಲದೆ ಅಥವಾ ದುಡ್ಡಿನ ಆಸೆಗೆ ಸತ್ತ ಕರುವಿನ ಹಾಗೆ ಹುಲ್ಲಿನ ಕರುವನ್ನು ಮಾಡಿ ಹಾಲು ಕರೆಯುವಾಗ ಹಸುವಿನ ಕಣ್ಣಿನ ಮುಂದೆ ಬೊಂತೆ ಯನ್ನು ತೋರಿಸಿ ಹಾಲು ಸೋರುವಂತೆ ಉತ್ತೇಜಿಸುತ್ತಾರೆ. ಆದರೆ ಇಂತಹ ಘಟನೆಗಳು ನಡೆಯುವಂತೆ ನೀವು ಉತ್ತೇಜಿಸುತ್ತಿರಲಿಲ್ಲ? ಇದು ಅಮಾನುಷವಾದದ್ದು. ಹಸು ಹಾಲು ಕರೆಯುವಾಗ ನೀವು ಗಮನಿಸಿದ್ದಿರಾ? ಹಸುವಿನ ಎರಡೂ ಕಣ್ಣುಗಳಲ್ಲಿ ನೀರು ಸುರಿಯುತ್ತಿತ್ತು ಎಂದರಂತೆ. ಇದು ಅವರ ಬದುಕಿನ ರೀತಿ.

ಉದಯ ರವಿ ಮನೆಯ ದೊಡ್ಡ ಅಂಗಳದ ಒಂದು ದೊಡ್ಡ ಸಂಪಿಗೆಯ ಮರವಿತ್ತು. ಕವಿಗಳು ವಿರಾಮವಾಗಿದ್ದ ಸಂದರ್ಭದಲ್ಲಿ ಆ ಮರದ ಕೆಳಗೆ ಕುರ್ಚಿಯಲ್ಲಿ ಕುಳಿತು ಮರದಲ್ಲಿ ಇರುತ್ತಿದ್ದ ಹಲವು ರೀತಿಯ ಪಕ್ಷಿಗಳ ಕಲರವವನ್ನು ಆನಂದಿಸುತ್ತಿದ್ದರು. ಒಂದು ದಿನ ತೇಜಸ್ವಿ-ಚೈತ್ರರೆಲ್ಲರೂ ಆ ಮರದಡಿ ಆಡಲು ಹೋದಾಗ ಅಪ್ಪ ಮರದಡಿ ಕೂರದೆ ಬೇರೆ ಕಡೆ ಕುಳಿತ್ತಿದ್ದರು ಮತ್ತು ಮಕ್ಕಳನ್ನು ಅಲ್ಲಿ ಆಟವಾಡ ಬೇಡಿ ಮರದಲ್ಲಿ ಪಕ್ಷಿಗಳು ಗೂಡು ಕಟ್ಟಿವೆ. ನಮ್ಮ ಗಲಾಟೆಯಿಂದ ಅವುಗಳ ಕೆಲಸಕ್ಕೆ ತೊಂದರೆಯಾಗುತ್ತದೆ. ಅವುಗಳ ವಂಶಾಭಿವೃದ್ಧಿಗೆ ನಮ್ಮಿಂದ ತೊಡಕುಂಟಾಗಬಹುದು ಎಂದು ತಿಳಿ ಹೇಳಿದರಂತೆ. ತಮ್ಮ ಮಕ್ಕಳು ಪುಟ್ಟವರಾಗಿದ್ದ ಸಂದರ್ಭದಲ್ಲಿ ಬೆಳಗ್ಗಿನ ಹೊತ್ತು ಅವರನ್ನೂ ವಾಯುವಿಹಾರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ದಾರಿಯುದ್ದಕ್ಕೂ ಕಣ್ಣಿಗೆ ಬೀಳುತ್ತಿದ್ದ ಬಿಲಗಳನ್ನು ರೂಪಿಸುತ್ತಿದ್ದ ಇಲಿಗಳು, ಗೂಡು ಕಟ್ಟುವ ಬೇರೆ ಬೇರೆ ತರಹದ ಇರುವೆಗಳು, ಆಹಾರ ಶೇಖರಿಸುವ ಇರುವೆಗಳು, ಮರದ ಮೇಲಿನ ವೈವಿಧ್ಯಮಯ ಪಕ್ಷಿಗಳ ಬಗ್ಗೆ ವಿವರಿಸುತ್ತಿದ್ದರಂತೆ.

ತೇಜಸ್ವಿ ಹಾಗು ಗೆಳೆಯರು ವಿವಿಧ ಕೆರೆಗಳಲ್ಲಿ ಗಾಳ ಹಾಕಿ ಮೀನು ಹಿಡಿಯುತ್ತಿದ್ದ ಸಂದರ್ಭಗಳಲ್ಲಿ (ಕುವೆಂಪು ಕುಲಪತಿಗಳಾಗಿದ್ದಾಗ) ಅವರು ಮನೆಗೆ ಬಂದು ತಕ್ಷಣ ಮೀನಿಗೆ ಗಾಳ ಹಾಕುತ್ತಿದ್ದ ಕಾಲದಲ್ಲಿ ಎಂತಹ ಮೀನುಗಳು ಸಿಕ್ಕಿವು, ಹೇಗಿದ್ದವು ಎಂಬೆಲ್ಲಾ ವಿವರಗಳನ್ನು ಕುತೂಹಲದಿಂದ ಕೇಳುತ್ತಿದ್ದರಂತೆ.

ಪೂರ್ಣಚಂದ್ರ ತೇಜಸ್ವಿ ಅವರು ಪುಟ್ಟ ಹುಡುಗನಾಗಿದ್ದ ಸಂದರ್ಭದಲ್ಲಿ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸಿನ ಮುಂದೆ ನಿಂತು ನೀವು ಸೂಳೆನ? ಎಂದು ಪ್ರಶ್ನಿಸುತ್ತಾರೆ. ಗಾಬರಿಯಾದ ಆ ಹೆಣ್ಣು ಮಗಳು ಆಳುತ್ತಾ ಹೇಮಾವತಿ ಅಮ್ಮನ ಹತ್ತಿರ ಬಂದು ನಡೆದದ್ದನ್ನು ಹೇಳುತ್ತಾಳೆ. ಅಮ್ಮನಿಗೆ ತಮ್ಮ ಮಕ್ಕಳು ಹೀಗೆ ಹೇಳಿದ್ದನ್ನು ಕೇಳಿ ಅಚ್ಚರಿ ಪಡುತ್ತಾರೆ. ಹಾಗೂ ಸಂಜೆ ಕುವೆಂಪು ಬಂದ ನಂತರದಲ್ಲಿ ನಡೆದದ್ದನ್ನು ತಿಳಿಸಿದರು. ಈ ಪದ ನಿನಗೆ ಹೇಗೆ ತಿಳಿಯತು ಎಂದು ಅಪ್ಪ ಗದರಿಸಿದಾಗ ತೇಜಸ್ವಿ ಅಮ್ಮ ಹೇಳಿದ್ದು ಎಂದು ಮುಗ್ಧವಾಗಿ ಹೇಳುತ್ತಾರೆ. ಒಂದು ಅಥವಾ ಎರಡನೇ ತರಗತಿಯಲ್ಲಿ ಓದುತ್ತಿದ್ದ ತೇಜಸ್ವಿಗೆ ತಂದೆ ಕುವೆಂಪು ಅವರಂತೆ ಮಧ್ಯ ಬೈತಲೆ ತೆಗೆದು ಹೇಮಾವತಿ ಅವರು ಶಾಲೆಗೆ ಕಳುಹಿಸುತ್ತಿದ್ದರು. ತರಗತಿಯ ಉಳಿದ ಹುಡುಗರು ಅವರ ಕೂದಲನ್ನು ಎಳೆದು ಹೆಣ್ಣಪ್ಪಿ ಎಂದು ಛೇಡಿಸುತ್ತಿದ್ದರು. ಆದ್ದರಿಂದ ತೇಜಸ್ವಿ ತಮ್ಮ ಮನೆಯ ಕನ್ನಡಿಯ ಮುಂದೆ ನಿಂತು ಎಡ ಬೈತಲೆ ತೆಗೆದುಕೊಳ್ಳುತ್ತಿದ್ದರು. ಹೇಮಾವತಿ ಅಮ್ಮ ಅದನ್ನು ಗಮನಿಸಿ ಇದೇನು ಸೂಳೇರಾ ಹಂಗೆ ಎಡ ಬೈತಲೆ ತಗೊಂಡಿದ್ದಿ ಅಂತ ಗದರಿಸಿ ಬೈತಲೆ ತೆಗೆದು ಕಳುಹಿಸುತ್ತಾರೆ. ಮಾರನೇ ದಿವಸ ಪಾತ್ರೆ ತೊಳೆಯುತ್ತಾ ಕುಳಿತ್ತಿದ್ದ ಹೆಣ್ಣು ಮಗಳು ಎಡ ಬೈತಲೆ ತೆಗೆದಿರುವುದನ್ನು ಗಮನಿಸಿದ್ದಾರೆ. ಅಮ್ಮನ ಪ್ರಕಾರ ಎಡ ಬೈತಲೆ ತೆಗೆದಿರುವವರು ಸೂಳೆಯರು. ಇವರೂ ಎಡ ಬೈತಲೆ ತೆಗೆದಿರುವುದರಿಂದ ಈಕೆಯೂ ಸೂಳೆಯೇ ಆಗಿರಬೇಕು ಎಂಬ ತರ್ಕ ಹುಡುಗನದ್ದು. ಕುವೆಂಪು ಅವರು ತಮ್ಮ ಪತ್ನಿಗೆ ಮಕ್ಕಳ ಸಾಮಾಜಿಕ ಬೆಳವಣಿಗೆಯಲ್ಲಿ ಅಪ್ಪ-ಅಮ್ಮನ ಪಾತ್ರ ಎಷ್ಟು ಮುಖ್ಯವಾಗುತ್ತದೆ ಎಂಬುದನ್ನು ತಿಳಿಸಿ ಹೇಳುತ್ತಾರೆ.

ಕುವೆಂಪು ಅವರು ಶ್ರೀ ರಾಮಾಯಣ ದರ್ಶನಂ ಕಾವ್ಯ ರಚಿಸುವ ಸಂದರ್ಭದಲ್ಲಿ ತೇಜಸ್ವಿ ಅವರ ಮೇಷ್ಟ್ರು ಪಾಠ ಹೇಳುತ್ತಾ ಕುವೆಂಪು ಅವರು ಮಹಾಕಾವ್ಯವನ್ನು ರಚಿಸುವಾಗ ಶುದ್ಧ ಸಸ್ಯಹಾರಿಯಾಗಿದ್ದು, ಮಡಿಯಲ್ಲಿ ಕಾವ್ಯ ರಚಿಸುತ್ತಾರೆ ಎಂದು ಹೇಳುತ್ತಾರೆ. ತೇಜಸ್ವಿಗೆ ಮನೆಯಲ್ಲಿ ತಮ್ಮ ತಂದೆ ಹಾಗೆ ನಡೆದು ಕೊಳ್ಳುತ್ತಿದ್ದದ್ದು ಕಂಡು ಬಂದಿರುವುದಿಲ್ಲ. ಶಾಲೆಯಿಂದ ಬಂದ ತಕ್ಷಣ ತೇಜಸ್ವಿ ಅವರು ಕುವೆಂಪು ಅವರನ್ನು ಈ ಕುರಿತು ಕೇಳುತ್ತಾರೆ. ಕುವೆಂಪು ಅವರಿಗೆ ಇದನ್ನು ಕೇಳಿ ಸಿಟ್ಟುಬರುತ್ತದೆ. ಆಹಾರಕ್ಕೂ-ಬರವಣಿಗೆಗೂ ಯಾವುದೇ ರೀತಿಯ ಸಂಬಂಧ ವಿಲ್ಲ. ಗುರುಗಳು ವಿದ್ಯಾರ್ಥಿಗಳಿಗೆ ದಾರಿ ತಪ್ಪಿಸುವ ಕೆಲಸ ಮಾಡಬಾರದು ನಿನ್ನ ಸಹ ಪಾಠಿಗಳಿಗೆ ಇದನ್ನು ತಿಳಿಸು ಎನ್ನುತ್ತಾರೆ.

ಕುವೆಂಪು ಕೀರ್ತಿಯನ್ನು ಶನಿ ಎಂದವರು. ಕೀರ್ತಿ ಶನಿ ಎಂಬ ಹೆಸರಲ್ಲಿ ಕವನವನ್ನು ರಚಿಸಿದ್ದಾರೆ. ಇವರು ಪ್ರಾಧ್ಯಾಪಕರಾಗಿ ಅನೇಕರಿಗೆ ಬೋಧಿಸಿದವರು ಇವರ ಶಿಷ್ಯರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಶ್ರೀ ಬಂಗಾರಪ್ಪನವರು ಒಬ್ಬರು. ತಾವು ಮುಖ್ಯಮಂತ್ರಿಯಾಗಿದ್ದಾಗ ಶ್ರೀಮಾನ್ ಬಂಗಾರಪ್ಪ ಅವರು ಉದಯರವಿಗೆ ಬಂದು ತಾವು ಏನಾದರೂ ಗುರುಕಾಣಿಕೆ ನೀಡಬೇಕು ಏನನ್ನು ಕೊಡಲಿ ಎಂದು ಕೇಳಿದರು. ಜನ ಸಾಮಾನ್ಯರಾದರೆ ತಮಗೆ ಬೇಕಿರುವ ಮೌಲ್ಯಯುತವಾದದನ್ನು ಕೇಳುತ್ತಿದ್ದರು. ಅದರೆ ಕುವೆಂಪು ನಮ್ಮೆಲ್ಲರಿಗಿಂತ ಭಿನ್ನರು ಆದ್ದರಿಂದಲೇ ಅವರು ತಮ್ಮನ್ನು ಕುಪ್ಪಳಿಗೆ ಕರೆದೊಯ್ಯಲು ಕೇಳಿಕೊಂಡರು. ಎದ್ದು ನಡೆದಾಡುವ ಸ್ಥಿತಿಯಲ್ಲಿಲ್ಲದ ಕುವೆಂಪು ಅವರನ್ನು ಮುಖ್ಯಮಂತ್ರಿಗಳು ಹೆಲಿಕಾಪ್ಟರನ್ನು-ವೈದ್ಯ-ಶುಶ್ರೂಕಿಯರೊಂದಿಗೆ ಕವಿಗಳನ್ನು ಕರೆದೊಯ್ದು ಇಡೀ ದಿವಸ ಕುಪ್ಪಳಿಯಲ್ಲಿ ಕಾಲ ಕಳೆಯುವಂತೆ ಮಾಡಿದರಂತೆ. ಮಲೆನಾಡಿನಲ್ಲಿ ಹುಟ್ಟಿ-ಬೆಳೆದ ಕವಿಗಳು ಓದು-ಉದ್ಯೋಗಕ್ಕೆ ಮೈಸೂರಿನಲ್ಲಿ ನೆಲೆಸಬೇಕಾಯಿತು. ಮೈಸೂರಿನಲ್ಲಿ ಕುಳಿತು ಸದಾಕಾಲವು ಹೋಗುವೆನು ನಾ ಹೋಗುವೆನು ಮಲೆಯ ನಾಡಿಗೆ ಮಲೆಯ ಬೀಡಿಗೆ ಎಂದು ಜಪಿಸುತ್ತಿದ್ದ ಕವಿ ಮನಸಿಗೆ ನಮ್ಮೆದಿಯನ್ನು ನೀಡಿದವರು ಸನ್ಮಾನ್ಯ ಶ್ರೀ ಬಂಗಾರಪ್ಪನವರು.

ಅಮೇರಿಕಾದಲ್ಲಿ ನೆಲೆಸಿದ್ದ ಆಭಿಮಾನಿಗಳು ಅಲ್ಲಿಗೆ ಪ್ರವಾಸ ಮಾಡಲು ವಿನಂತಿಸಿ ನಿಮ್ಮ ಆಗಮನವನ್ನು ನಿರೀಕ್ಷಿಸುತ್ತಾ ತಮ್ಮನ್ನು ಮಹಾರಾಜನಂತೆ ನೋಡಿಕೊಳ್ಳುವ ಏರ್ಪಾಟನ್ನು ನಡೆಸಿದ್ದಾರೆ ಎಂದು ಬರಲು ಒತ್ತಾಯಿಸುತ್ತಾರೆ. ಶ್ರೀ ಗುರು ನನ್ನನ್ನು ಸ್ಥಾವರ ಪ್ರಕೃತಿಯನ್ನಾಗಿ ಮಾಡಿದ್ದಾನೆ. ಮಹಾರಾಜನಾಗಿ ಮಾಡಬಲ್ಲ ಕೆಲಸಗಳನ್ನು ಜಂಗಮ ಪ್ರಕೃತಿಯ ನೀವೇ ನಿಯೋಜಿತರಾಗಿದ್ದೀರಿ. ಶ್ರೀ ಗುರುವಿನ ಇಚ್ಛೆ ಕೃಪೆಯಿಟ್ಟು ಕೆಲಸ ಮುಂದುವರಿಸಿ ಎನ್ನುತ್ತಾರೆ. ಅವರ ಬದಲಿಗೆ ಬೇರೆಯವರಿಗೆ ಇಂತಹ ಅವಕಾಶ ದೊರಕ್ಕಿದ್ದಿದ್ದರೆ!

**ಕುವೆಂಪು ಅವರು ಬ್ರಾಹ್ಮಣ ದ್ವೇಷಿಗಳು ಎಂದು ಕೆಲ ಗುಂಪುಗಳು ಪ್ರಚಾರ ಮಾಡುತ್ತಿದ್ದರು. ನನ್ನ ಪರಮ ಆರಾಧ್ಯ ಮೂರ್ತಿಯಾದ ಶ್ರೀ ರಾಮಕೃಷ್ಣ ಪರಮ ಹಂಸರು ಜನ್ಮತಃ ಬ್ರಾಹ್ಮಣರು ನನ್ನ ದೀಕ್ಷಾ ಗುರುಗಳೂ ಪರಮ ಹಂಸರ ನೇರ ಶಿಷ್ಯರೂ ಆದ ಸ್ವಾಮಿ ಶಿವಾನಂದರು ಬ್ರಾಹ್ಮಣರು. ನನ್ನ ಸಾಹಿತ್ಯಿಕ ಶ್ರೇಯಸ್ಸಿಗೆ ಕಾರಣರಾದ ಟಿ.ಎಸ್. ವೆಂಕಣ್ಣಯ್ಯನವರೂ ಎ.ಆರ್. ಕೃಷ್ಣಶಾಸ್ತ್ರಿಗಳೂ, ಬಿ.ಎಂ.ಶ್ರೀಯವರೂ ಬ್ರಾಹ್ಮಣರು ಇಷ್ಟು ಜನರಿಗೆ ಋಣಿಯಾಗಿರುವ ನಾನು ಬ್ರಹ್ಮ ದ್ವೇಷಿಯಾಗಿರಲು ಸಾಧ್ಯವೇ? ಎಂದು ಕುವೆಂಪು ಆ ಗುಂಪಿಗೆ ಉತ್ತರಿಸಿದರಂತೆ.**

ಜಾತ್ಯಾತೀತರಾಗಿದ್ದ ಕುವೆಂಪು ಅವರು ಶ್ರೀರಂಗ ಪಟ್ಟಣದಲ್ಲಿ ಯುವ ಜನ ಸಮ್ಮೇಳನದಲ್ಲಿ ಯುವಕರು ನಿರಂಕುಶ ಮತಿಗಳಾಗಬೇಕು ಎಂಬ ವಿಷಯವಾಗಿ ಭಾಷಣ ಮಾಡಿದರು. ಇವರ ಭಾಷಣಕ್ಕೆ ಕ್ರೋಧ ಯುಕ್ತ ಟೀಕೆಗಳು ಕೋಲಾಹಲಗಳು ನಡೆದವು. ದೂರು ವಿಶ್ವವಿದ್ಯಾಲಯಕ್ಕೂ ಹೋಯಿತು. ತನಿಖೆ ನಡೆಸಲು ವೆಂಕಣ್ಣಯ್ಯನವರು ನೇಮಕವಾದರು. ಅವರು ಆ ಭಾಷಣದ ಪ್ರತಿ ತರಿಸಿಕೊಂಡು ಓದಿ ವಿಶ್ವ ವಿದ್ಯಾನಿಲಯಕ್ಕೆ ಬರೆದರಂತೆ ನನ್ನ ಮಗನಿಗೆ ಬುದ್ಧಿ ಹೇಳ ಬೇಕಾದರೆ ಇದಕ್ಕಿಂತಲೂ ಉತ್ತಮವಾಗಿ ಮತ್ತು ಸಮರ್ಥವಾಗಿ ನಾನು ಏನನ್ನೂ ಹೇಳಲಾರೆ ಎಂದು.

ಮೈಸೂರು ವಿ.ವಿ. ಕನ್ನಡ ಅಧ್ಯಾಪಕರ ಹುದ್ದೆಗೆ ಅರ್ಜಿ ಕರೆದಿದ್ದರು. ಡಾ.ಪ್ರಭುಶಂಕರ ಅವರು ಕುವೆಂಪು ಅವರ ಪ್ರಥಮ ಸಂಶೋಧನಾ ವಿದ್ಯಾರ್ಥಿ ಹಾಗು ಅಚ್ಚು ಮೆಚ್ಚಿನವರೂ ಆಗಿದ್ದರು. ಕುವೆಂಪು ಪ್ರಭು ಶಂಕರ ಅವರನ್ನು ಕರೆದು ನೋಡಿ ನೀವು ಅರ್ಜಿ ಹಾಕ ಬೇಡಿ ದೇವುಡು ನರಸಿಂಹ ಶಾಸ್ತ್ರಿಗಳ ಮಗ ಶ್ರೀ ದೇ.ನ. ರಾಮು ನಿಮ್ಮ ಮೇಷ್ಟ್ರು ಅವರು 5-6 ವರ್ಷ ಗಳಿಂದಲೂ ಲೋಕಲ್ ಕ್ಯಾಂಡಿಡೇಟ್ ಆಗಿ ಕೆಲಸ ಮಾಡುತ್ತಿದ್ದಾರೆ. ನೀವು ಅರ್ಜಿ ಹಾಕಿದರೆ ಪ್ರತಿಭೆಯನ್ನು ಗಮನಿಸಿ ನಿಮಗೆ ಈ ಕೆಲಸ ಸಿಕ್ಕಿ ಬಿಡುತ್ತದೆ. ಶ್ರೀ ರಾಮು ಅವರಿಗೆ ತಪ್ಪಿ ಹೋಗುತ್ತದೆ. ಅವರು ಎಷ್ಟು ವರ್ಷಗಳು ಕಾಯಂ ಹುದ್ದೆಗಾಗಿ ಕಾಯಬೇಕೋ ಗೊತ್ತಿಲ್ಲ. ನೀವು ಅರ್ಜಿ ಹಾಕಬೇಡಿ ಮುಂದೆ ನಿಮಗೆ ಬೇಕಾದಷ್ಟು ಅವಕಾಶಗಳು ಸಿಕ್ಕುತ್ತವೆ ಎಂದು ಪ್ರಭ ಶಂಕರಿಗೆ ಹೇಳಿದರು.

ಇದೇ ದೇ.ನ.ರಾಮು ಅವರ ತಂದೆ ಶ್ರೀ ದೇವುಡು ನರಸಿಂಹಶಾಸ್ತ್ರಿಗಳೇ ಯುವಕರು ನಿರಂಕುಶ ಮತಿಗಳಾಗಬೇಕು ಎಂಬ ಭಾಷಣಕ್ಕೆ ವಿರೋಧ ಎಬ್ಬಿಸಿದವರು. ಈ ವಿಚಾರ ಸ್ವತಃ ಕವಿಗೆ ತಿಳಿದಿದ್ದರೂ ಜಾತಿ ಹಾಗು ನ್ಯಾಯಕ್ಕೆ ಕಿಂಚಿತ್ತೂ ಪೂರ್ವಾಗ್ರಹವನ್ನು ಉಳಿಸಿಕೊಳ್ಳದೆ ನಡೆದುಕೊಂಡರು.

ಪ್ರೊ.ಡಿ.ಎಲ್.ನರಸಿಂಹಾಚಾರ್ಯರ ಪ್ರಶಾಂತ ಪಾಂಡಿತ್ಯಕ್ಕೆ ಗೌರವ ಕೊಟ್ಟ ಕವಿಗಳು ಪ್ರೊ.ಎ.ಎನ್. ಮೂರ್ತಿರಾಯರಲ್ಲಿ ತಮಗೆ ಒದಗಿದ ಮತ್ತೊಂದು ಸಂದಿಗ್ಧ ಸ್ಥಿತಿಯನ್ನು ಹೀಗೆ ಹಂಚಿಕೊಳ್ಳುತ್ತಾರೆ. ನೋಡಿ ಮೂರ್ತಿರಾಯರೇ, ಇಂದು ಯಾವುದನ್ನು ಸಾಮಾಜಿಕ ನ್ಯಾಯ ಎಂದು ಕರೆಯುತ್ತೇವೆಯೋ ಅದರ ಪ್ರಕಾರ ನಾನು ಈ ಹುದ್ದೆಯು ಬ್ರಾಹ್ಮಣರಲ್ಲದವರು ಪಡೆಯುವಂತೆ ಮಾಡಬೇಕು. ಆದರೆ ಅಂಥಹವರು ವಿದ್ವತ್ತಿನಲ್ಲಿ ನರಸಿಂಹಾಚಾರ್ಯರ ಜಾನು ಜಂಘೆಯವರೆಗಾದರೂ (ಮಂಡಿ) ಮುಟ್ಟುವಂತಹ ವಿದ್ಯುತ್ ಉಳ್ಳವರಾಗಿರಬೇಕು. ಆದರೆ ಅಂಥಹವರು ಯಾರೂ ಕಾಣುತ್ತಿಲ್ಲೇ ಇಲ್ಲವಲ್ಲ. ಆದ್ದರಿಂದ ಈ ಹುದ್ದೆ ನರಸಿಂಹಚಾರ್ಯರಿಗೆ ತಾನೇ ಸಲ್ಲಬೇಕು. ಮುಂದೆ ನರಸಿಂಹಚಾರ್ಯರಿಗೆ ಈ ಹುದ್ದೆ ದೊರಕಿತು. ಜಗತ್ತಿನ ಎಲ್ಲಾ ದೇಶಗಳ ಪುರೋಹಿತ ಷಾಹಿಯ ಮೇಲೆ ದ್ವೇಷವಿತ್ತು. ಪುರೋಹಿತ ಷಾಹಿಯ ಕಾರಣದಿಂದ ಶೋಷಣೆ, ದಾರಿದ್ರ್ಯ, ದಮನಗಳನ್ನು ಅನುಭವಿಸುತ್ತಿರುವ ಭಾರತೀಯರ ಬಗ್ಗೆ ಕವಿಗೆ ನೋವಿತ್ತು. ಹೊರತು ಬ್ರಾಹ್ಮಣರ ಮೇಲಲ್ಲ.

ಒಕ್ಕಲಿಗೆ ಜನಾಂಗದ ಕೆಲ ಮುಖಂಡರು ಬಂದು ನೀವು ನಮ್ಮ ಜಾತಿಯ ನಾಯಕರಾಗಬೇಕು ಎಂದು ಕೇಳಿದರಂತೆ. ಕವಿಗಳು ಏನೊಂದನ್ನು ಮಾತಾಡದೆ ತಮ್ಮ ಕೊಠಡಿಯೊಳಗೆ ಹೋಗಿ ಬಂದು ಭೂಪಟ ತಂದು ತೋರಿಸಿ ನೋಡಿ ಇದು ಜಗತ್ತು ಎಷ್ಟು ದೊಡ್ಡದು ಅದರಲ್ಲಿ ಭಾರತ ಇದರ ಸ್ಥಾನ ನೋಡಿ. ಅದರಲ್ಲಿ ದಕ್ಷಿಣ ಭಾರತ, ಅದರಲ್ಲಿ ಮೈಸೂರು, ಈ ಊರಿನ ಹೆಸರು ಅಕಸ್ಮಾತ್ ಇದೆ. ಇಲ್ಲಿನ ಒಂದು ಜಾತಿ ಅದಕ್ಕೆ ನಾನು ನಾಯಕ! ಎಂಥ ದೊಡ್ಡ ಪದವಿ. ಎಂದರಂತೆ ಬಂದವರು ಬಂದ ದಾರಿ ಹಿಡಿದು ಸುಮ್ಮನೆ ಹಿಂದಕ್ಕೆ ಹೋದರಂತೆ. ಇದು ವಿಶ್ವ ಮಾನವನ ಬದುಕಿನ ದಾರಿ.

ಮಂತ್ರ ಮಾಂಗಲ್ಯ ವಿವಾಹದ ಸರಳತೆ ಎಲ್ಲರಿಗೂ ಮನ ಮುಟ್ಟವಂತಿದೆ. ಬ್ರಾಹ್ಮಣರನ್ನು ಮದುವೆಗೆ ಆಹ್ವಾನಿಸದೆ ವಧು-ವರರ ಹೆತ್ತವರ ಸಮ್ಮುಖದಲ್ಲಿ ಅತಿ ಕಡಿಮೆ ಸಂಖ್ಯೆಯ ಆಪ್ತರ ಎದುರಲ್ಲಿನ ವಿವಾಹ. ತೇಜಸ್ವಿ-ರಾಜೇಶ್ವರಿಯನ್ನು ಮದುವೆಯಾಗುತ್ತೇನೆ ಎಂದಾಗ ಚಪ್ಪಾಳೆ ತಟ್ಟಿ ಸಂತೋಷವನ್ನು ಆಚರಿಸಿದ ಕವಿ ಪತ್ನಿಗೆ ಹೇಳುತ್ತಾರೆ. ಬಾ ದೇವರ ಮನೆಯಲ್ಲಿ ಕುಳಿತು ದೇವರನ್ನು ಪ್ರಾರ್ಥಿಸೋಣ ನಮ್ಮ ಮನೆಗೆ ಬರಲಿರುವ ಹೆಣ್ಣು ಮಗುವನ್ನು ಮಗಳಂತೆ ಸತ್ಕರಿಸುವಂತಹ ಬುದ್ಧಿಯನ್ನು ನಮಗೆ ಕೊಡು ಎಂದು ಇದೇ ಕವಿ ಮನಸಿನ ಮಾನವತಾವಾದ.

ಅವರ ನಾಲ್ಕು ಮಕ್ಕಳೂ ಮೊಮ್ಮಕ್ಕಳೆಲ್ಲರೂ ಮಂತ್ರ ಮಾಂಗಲ್ಯವನ್ನು ಸ್ವೀಕರಿಸಿ, ಗೌರವಿಸಿ, ಅದರಂತೆಯೇ ವಿವಾಹವಾದರು. ಇಂತಹ ಆನೇಕಾನೇಕ ಘಟನೆಗಳು, ವಿಚಾರಗಳು, ನಡವಳಿಕೆಗಳು ನಮ್ಮೊಂದಿಗಿವೆ. ಇಂತಹ ಗಂಭೀರವಾದ ಪ್ರಬುದ್ಧ ವ್ಯಕ್ತಿತ್ವದ ಕುವೆಂಪು ಹಾಸ್ಯ ಪ್ರಜ್ಞೆಯನ್ನು ಉಳ್ಳವರಾಗಿದ್ದರು.

ಕುಲಪತಿಗಳಾಗಿದ್ದ ಸಂದರ್ಭದಲ್ಲಿ ನಿಮ್ಮ ಹುದ್ದೆ ಹೇಗಿದೆ ಎಂದು ಕೇಳಿದರಂತೆ. ಇನ್ನೇನಿದೆ ಫೈಲ್ಸ್ ಹಾಗು ಪೈಲ್ಸ್ ಎಂದರಂತೆ.

ಕವಿಗಳು ಪ್ರಿ ಫೆಕ್ಟ್ ಕಾರ್ ತೆಗೆದುಕೊಂಡಿದ್ದರು. 3 ಗಂಟೆಗಳ ಕಾಲ ಸತತವಾಗಿ ಗೋವಿನ ಹಾಡು ಕಾವ್ಯದ ಸೌಂದರ್ಯ, ರಸ, ಧ್ವನಿಗಳ ಬಗ್ಗೆ ಉಪನ್ಯಾಸ ನೀಡಿದರು. ಪಾಠ ಮುಗಿದ ನಂತರ ವಿದ್ಯಾರ್ಥಿಗಳು ಕಾರಿನಲ್ಲಿ ಬಗ್ಗಿ ನೋಡಿದರೆ ಚಿಕ್ಕ ಮಕ್ಕಳಾಗಿದ್ದ ತೇಜಸ್ವಿ ಹಾಗು ಚೈತ್ರ ಇದ್ದಾರೆ. ಕಾರಿನಲ್ಲಿ ಬೀಗ ಹಾಕಿ ಗಾಳಿಗೋಸ್ಕರ ಸ್ವಲ್ಪ ಕಿಟಕಿಯ ಗಾಜನ್ನು ತೆಗೆದಿದ್ದಾರೆ! ಕವಿಗಳನ್ನು ಕೇಳಿದರೆ ಇವರನ್ನು ನಮ್ಮ ತರಗತಿಯಲ್ಲಿ ಕೂರಿಸಿಕೊಂಡಿದ್ದಾರೆ. ನನಗಾಗಲಿ ನಿಮಗಾಗಲಿ ಗೌರವವಿರುತ್ತಿರಲಿಲ್ಲ. ನಾನು ಗೋವಿನ ಕಥೆಯನ್ನು ನಿಮಗೆ ಬೋಧಿಸಿದೆ. ಎಂ.ಎ. ಓದುವ ದೊಡ್ಡವರೂ ಗೋವಿನ ಹಾಡನ್ನು ಕೇಳಿಸಿಕೊಳ್ಳುತ್ತಾರೆ ಎಂದು ಕೊಳ್ಳುವು ದಿಲ್ಲವೇ? ಇದು ಕುವೆಂಪು!

ಕುವೆಂಪು ದೈವಾಧೀನರಾದ ಸಂದರ್ಭದಲ್ಲಿ ಅವರ ಕೊನೆಯ ದರ್ಶನಕ್ಕೆ ನಿಂತಿದ್ದ ಉದ್ದದ ಸಾಲಿನಲ್ಲಿ ತಮ್ಮ ಕಸಬರಿಗೆ ಹಿಡಿದ ಜಲಗಾರರಿದ್ದರು. ನೀವೇಕೆ ಇಲ್ಲಿ ನಿಂತಿದ್ದೀರಿ ನೀವು ಅವರನ್ನು ಓದಿದ್ದೀರೇ? ಎಂದು ಕೇಳಿದಾಗ ಜಲಗಾರರೂ ಮನುಷ್ಯರೇ ಎಂದು ಹೇಳಿದ ದೊಡ್ಡವರನ್ನು ನೋಡಬೇಕು. ನಮಸ್ಕರಿಸಬೇಕು ಎಂದರು.

ಕುವೆಂಪು ಅವರ ಜ್ಞಾನಪೀಠ ಪ್ರಶಸ್ತಿ ಬಿರುದು-ಬಾವಲಿಗಳನ್ನು ಮೀರಿ ವಿಶ್ವಮಾನವನಾಗಿ ಬೆಳೆದು ನಿಂತ ವ್ಯಕ್ತಿತ್ವಕ್ಕೆ ನಮ್ಮೆಲ್ಲರ ಗೌರವವನ್ನು ನೀಡುತ್ತಾ ನಾವೆಲ್ಲರೂ ಜಾತ್ಯಾತೀತರಾಗಿ ಬೆಳೆಯೋಣ.

## ಪ್ರಗತಿ ಪ್ರತಿಪಾದಿಸಿದ ಶ್ರೇಷ್ಠ ದಾರ್ಶನಿಕ ಕುವೆಂಪು

- ಕುವೆಂಪು ಅವರು ಕನ್ನಡದ ಹೆಸರಾಂತ ಬರಹಗಾರ, ಕವಿ, ನಾಟಕಕಾರರು, ಸಮಾಜ ಸುಧಾರಕರು ಮತ್ತು ಪ್ರಗತಿಗಾಗಿ ಶ್ರಮಿಸಿದ ದಾರ್ಶನಿಕರೂ ಆಗಿದ್ದರು.
- ಕುವೆಂಪು ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹಳ್ಳಿಯಲ್ಲಿ ಮುಗಿಸಿದರು. ನಂತರ ಅವರು ತಮ್ಮ ಪ್ರೌಢ ಶಿಕ್ಷಣಕ್ಕಾಗಿ ಮೈಸೂರಿನ ಸರ್ಕಾರಿ ಪ್ರೌಢಶಾಲೆಗೆ ಹೋದರು. ಅಲ್ಲಿ ಅವರು ಶಿಕ್ಷಣ ದಲ್ಲಿ ಉತ್ತಮ ಸಾಧನೆ ಮಾಡಿದರು. ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದರು. ಪ್ರೌಢ ಶಿಕ್ಷಣವನ್ನು ಮುಗಿಸಿದ ಕುವೆಂಪು ಅವರು ಉನ್ನತ ವ್ಯಾಸಂಗಕ್ಕಾಗಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು.
- ಕುವೆಂಪು ಅವರ ಬರವಣಿಗೆ ಅನನ್ಯವಾಗಿದ್ದು, ಆಡುನುಡಿಯನ್ನು ಬಳಸಿ ಕನ್ನಡ ಕಾವ್ಯವನ್ನು ಜನ ಸಾಮಾನ್ಯರಿಗೆ ಅರ್ಥವಾಗುವ ರೀತಿಯನ್ನು ರಚಿಸುತ್ತಿದ್ದರು. ಕುವೆಂಪು ಅವರ ಸಾಹಿತ್ಯಿಕ ವೃತ್ತಿ ಜೀವನವು ಐದು ದಶಕಗಳವರೆಗೆ ವ್ಯಾಪಿಸಿದೆ. ಈ ಅವಧಿಯಲ್ಲಿ ಅವರು 25 ಕವನ ಸಂಕಲ, 8 ನಾಟಕ, 2 ಕಾದಂಬರಿ, 2 ಮಹಾಕಾವ್ಯಗಳು ಮತ್ತು ಹಲವಾರು ಪ್ರಬಂಧಗಳನ್ನು ಬರೆದಿದ್ದಾರೆ. ಅವರು ಸಮೃದ್ಧ ಬರಹಗಾರರಾಗಿದ್ದರು. ಅವರ ಕೃತಿಗಳು ಪ್ರಕೃತಿ, ಪ್ರೀತಿ, ಆಧ್ಯಾತ್ಮಿಕತೆ, ಸಾಮಾಜಿಕ ಸಮಸ್ಯೆಗಳು ಮತ್ತು ದೇಶಭಕ್ತಿಯಂತಹ ವ್ಯಾಪಕವಾದ ವಿಷಯ ಗಳನ್ನು ಒಳಗೊಂಡಿವೆ.
- ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ ಅಪಾರ. ಅವರು ಕಾವ್ಯದ ಹೊಸ ರೂಪಗಳನ್ನು ಪರಿಚಯಿಸಿದರು ಮತ್ತು ಕನ್ನಡ ಸಾಹಿತ್ಯಕ್ಕೆ ಆಧುನಿಕತೆಯನ್ನು ತಂದರು. ಅವರ ಕೃತಿಗಳು ಅವರ ನಂತರ ಬಂದ ಅನೇಕ ಕನ್ನಡ ಬರಹಗಾರರಿಗೆ ಸ್ಫೂರ್ತಿ ನೀಡಿತು ಮತ್ತು ಅವರನ್ನು ಕನ್ನಡ ಸಾಹಿತ್ಯದಲ್ಲಿ ಪ್ರವರ್ತಕ ಎಂದು ಪರಿಗಣಿಸಲಾಗಿದೆ.
- ಕುವೆಂಪು ಅವರ ಸಾಹಿತ್ಯಿಕ ಕೊಡುಗೆಗಳಲ್ಲದೆ ಸಮಾಜ ಸುಧಾರಕರು ಆಗಿಯೂ ಹೊರ ಹೊಮ್ಮಿದವರು. ಅವರು ಸಾಮಾಜಿಕ ಸುಧಾರಣೆ ಮತ್ತು ಪ್ರಗತಿಯ ಕಾರಣಕ್ಕೆ ಆಳವಾಗಿ ಬದ್ಧ ರಾಗಿದ್ದರು. ಶಿಕ್ಷಣವು ಸಾಮಾಜಿಕ ಬದಲಾವಣೆಗೆ ಪ್ರಮುಖವಾಗಿದೆ ಎಂದು ಅವರು ನಂಬಿ ದ್ದರು. ಸಾರ್ವತ್ರಿಕ ಶಿಕ್ಷಣಕ್ಕಾಗಿ ಪ್ರತಿಪಾದಿಸಿದರು. ಕುವೆಂಪು ಅವರು ಮಹಿಳಾ ಹಕ್ಕುಗಳ ಪ್ರಬಲ ಪ್ರತಿಪಾದಕರಾಗಿದ್ದರು. ಜೊತೆಗೆ ಮಹಿಳೆಯರ ಸಬಲೀ ಕರಣದಲ್ಲಿ ನಂಬಿಕೆ ಇಟ್ಟಿದ್ದರು. ಅವರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುತ್ತಿದ್ದು, ಜಾತಿ ತಾರತಮ್ಯ ನಿರ್ಮೂಲನೆಗೆ ಶ್ರಮಿಸಿದರು.



# ಜನ ಸಾಮಾನ್ಯರ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವ ಬಿಜೆಪಿ

## ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ



• ಪ್ರಜೋದಯ ವರದಿ

**ನವದೆಹಲಿ:** ಜನ ಸಾಮಾನ್ಯರ ಹಕ್ಕುಗಳನ್ನು ಬಿಜೆಪಿ ಕಸಿದುಕೊಳ್ಳುತ್ತಿದೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಉಳಿಸಲು ದಂಡಿ ಯಾತ್ರೆ ಹಾಗೂ ಕ್ವಿಟ್ ಇಂಡಿಯಾ ಚಳವಳಿಯ ಅದೇ ಉತ್ಸಾಹ ದೊಂದಿಗೆ ಕಾಂಗ್ರೆಸ್ ಕಾರ್ಯಕರ್ತರು ಭಾಗವ ಹಿಸಬೇಕೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಕರೆ ನೀಡಿದ್ದಾರೆ.

ಸ್ವಾತಂತ್ರ್ಯ ಪೂರ್ವ ನಡೆದ ಚಳವಳಿಯಲ್ಲಿ ಬಿಜೆಪಿಯ ಪೂರ್ವಜರು ಯಾವುದೇ ಪಾತ್ರ ವನ್ನು ಹೊಂದಿಲ್ಲ. ಈಗ ಜನರ ಹಕ್ಕುಗಳನ್ನು ಕಸಿದುಕೊಳ್ಳುವಲ್ಲಿ ನಿರತರಾಗಿದ್ದಾರೆಂದು ಖರ್ಗೆ ಆರೋಪಿಸಿದ್ದಾರೆ.

ಕಾಂಗ್ರೆಸ್ 140ನೇ ಸಂಸ್ಥಾಪನಾ ದಿನಾಚರಣೆ ಉದ್ದೇಶಿಸಿ ಮಾತನಾಡಿದ ಅವರು, ಯುಪಿಎ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಮಹತ್ವಾ ಕಾಂಕ್ಷಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾನೂನನ್ನು ರಕ್ಷಿಸುವುದಾಗಿ ಹೇಳಿದ್ದಾರೆ.

ನಾವು ಅಧಿಕಾರದಲ್ಲಿ ಇಲ್ಲದೇ ಇರಬಹುದು. ಕಾಂಗ್ರೆಸ್ ಎಂದಿಗೂ ಧರ್ಮದ ಹೆಸರಿನಲ್ಲಿ ಮತ ಗಳನ್ನು ಕೇಳಿಲ್ಲ, ದೇವಾಲಯ ಹಾಗೂ ಮಸೀದಿ ಗಳ ನಡುವೆ ದ್ವೇಷವನ್ನು ಬಿತ್ತಿಲ್ಲ. ಬಿಜೆಪಿ ದೇಶ ವನ್ನು ವಿಭಜಿಸುತ್ತದೆ. ಆದರೆ ಕಾಂಗ್ರೆಸ್ ಒಗ್ಗೂಡಿ ಸುತ್ತದೆ. ಬಿಜೆಪಿಯ ಧರ್ಮವನ್ನು ರಾಜ ಕೀಯ ವನ್ನಾಗಿ ಬಳಸಿಕೊಂಡಿದೆ ಎಂದು ಆರೋಪಿಸಿದ್ದಾರೆ.

ಕಳೆದ 11 ವರ್ಷಗಳಲ್ಲಿ ಬಿಜೆಪಿ ಸರ್ಕಾರವು, ಬಂಡವಾಳಶಾಹಿಗಳಿಗೆ ಲಾಭ ಮಾಡಿಕೊಡಲು ಹಲವಾರು ಕಾನೂನುಗಳನ್ನು ತಿದ್ದುಪಡಿ ಮಾಡಿದೆ. ನರೇಗಾವನ್ನು ನಾಶಪಡಿಸಲಾಗಿದೆ. ಅರಣ್ಯ, ಜಲ ಮತ್ತು ಜಮೀನಿನ ಲೂಟಿ ಮುಂದುವರಿದಿದೆ. ಸತ್ಯವನ್ನು ಮರೆಮಾಚಲು ಜನ ಗಣತಿಯನ್ನು ನಡೆಸುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ನಿರ್ಮಿ ಸಲಾದ ಸಂಸ್ಥೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅವಧಿಯಲ್ಲಿ ದುರ್ಬಲಗೊಳಿಸಲಾಗಿದೆ ಎಂದು ಅವರು ಟೀಕಿಸಿದ್ದಾರೆ.

ಆರ್‌ಎಸ್‌ಎಸ್-ಬಿಜೆಪಿ ನಾಯಕರು ಸಂವಿ ಧಾನವನ್ನು ಅಂಗೀಕರಿಸಿಲ್ಲ. ದೇಶದ ತ್ರಿವರ್ಣ ಧ್ವಜ, ಅಶೋಕ ಚಕ್ರ, ವಂದೇ ಮಾತರಂ ಅನ್ನು ಸಹ ಅಂಗೀಕರಿಸಿಲ್ಲ. ಬಿಜೆಪಿ ಅಧಿಕಾರದಲ್ಲಿ ಸಂವಿ ಧಾನ ಹಾಗೂ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಕಳೆದ 140 ವರ್ಷಗಳಲ್ಲಿ ಕಾಂಗ್ರೆಸ್ ಹಲವು ಏಳು-ಬೀಳುಗಳನ್ನು ಕಂಡಿದೆ. ಆದರೆ ಕಾಂಗ್ರೆಸ್ ಒಂದು ಸಿದ್ಧಾಂತವಾಗಿದೆ. ಸಿದ್ಧಾಂತ ಎಂದಿಗೂ ಸೋಲುವುದಿಲ್ಲ. ಹಾಗಾಗಿ ಇದು ಕೇವಲ ಚುನಾ ವಣೆಗಾಗಿ ನಡೆಯುವ ಹೋರಾಟವಲ್ಲ. ಇದು ಭಾರತದ ಆತ್ಮಕ್ಕಾಗಿ ನಡೆಯುವ ಹೋರಾಟ. ಈ ಸ್ಥಿತಿಯಲ್ಲಿ ಕಾಂಗ್ರೆಸ್ ಹೋರಾ ಡದಿದ್ದರೆ ಸಂವಿ ಧಾನವನ್ನು ಯಾರು ರಕ್ಷಿಸುತ್ತಾರೆ? ಪ್ರಜಾ ಪ್ರಭುತ್ವವನ್ನು ಯಾರು ರಕ್ಷಿಸುತ್ತಾರೆ ಎಂದು ಹೇಳಿದ್ದಾರೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಹೆಸರನ್ನು ವಿಬಿ ಜಿ ರಾಮ್ ಜಿ ಎಂದು ಬದಲಾಯಿಸಿರುವುದರ ವಿರುದ್ಧ ಕಾಂಗ್ರೆಸ್, ಜನವರಿ 5ರಿಂದ ನರೇಗಾ ಬಚಾವೊ ಅಭಿಯಾನ ಹಮ್ಮಿಕೊಂಡಿದೆ.

## ದುಬೈನಲ್ಲಿನ ಕನ್ನಡ ಶಾಲೆಗೆ ಮೋದಿ ಶ್ಲಾಘನೆ

• ಪ್ರಜೋದಯ ವರದಿ

**ನವದೆಹಲಿ:** ದುಬೈನಲ್ಲಿ ನೆಲೆಸಿರುವ ಭಾರತೀಯ ಅನಿವಾಸಿ ಗಳು, ಸುಂದರವಾದ ಕನ್ನಡ ಭಾಷೆಯನ್ನು ಜನಪ್ರಿಯ ಗೊಳಿಸಲು ಮಾಡುತ್ತಿರುವ ಪ್ರಯತ್ನ ಶ್ಲಾಘನೀಯ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಮಾಸಿಕ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ರಾಷ್ಟ್ರವನ್ನು ಉದ್ದೇಶಿಸಿ ಮಾತ ನಾಡಿದ ಅವರು, ದುಬೈ ಕನ್ನಡಿಗರ ಭಾಷಾ ಪ್ರೇಮವನ್ನು ಕೊಂಡಾಡಿದ್ದಾರೆ. ದುಬೈನಲ್ಲಿ ವಾಸಿ ಸುತ್ತಿ ರುವ ಕನ್ನಡಿಗರು ತಮ್ಮಲ್ಲಿಯೇ ಒಂದು ಪ್ರಶ್ನೆಯನ್ನು ಕೇಳಿ ಕೊಂಡರು. ನಮ್ಮ ಮಕ್ಕಳು ತಂತ್ರಜ್ಞಾನದ ಜಗತ್ತಿನಲ್ಲಿ ಬೆಳೆಯುತ್ತಿ ದ್ದಾರೆ. ಆದರೆ ಅವರು ತಮ್ಮ ನೆಲದ ಭಾಷೆಯಿಂದ ದೂರವಾ ಗುತ್ತಿದ್ದಾರೆಯೇ ಎಂದು ಆಲೋಚಿಸಿದ್ದಾರೆ. ಆ ಆಲೋಚನೆ ಯಿಂದ ಹುಟ್ಟಿದ್ದೇ ಕನ್ನಡ ಪಾಠ ಶಾಲೆ. ಈ ಕನ್ನಡ ಶಾಲೆಯಲ್ಲಿ ಮಕ್ಕಳಿಗೆ ಕನ್ನಡ ಓದು, ಬರಹ ಹಾಗೂ ಮಾತನಾಡುವುದನ್ನು ಕಲಿಸಲಾಗುತ್ತಿದೆ. ಸುಮಾರು ಒಂದು ಸಾವಿರ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸುವ ಕೆಲಸವಾಗುತ್ತಿದೆ. ಈ ಮೂಲಕ ದುಬೈ ನಲ್ಲಿ ಇರುವ ಕನ್ನಡಿಗರು ಭಾಷಾಭಿಮಾನ ಮೆರೆಯುತ್ತಿದ್ದಾರೆ. ಕನ್ನಡ ನಾಡುನುಡಿ, ನಮ್ಮ ಹೆಮ್ಮೆ ಎಂದು ಪ್ರಧಾನಿ ಹೇಳಿದ್ದಾರೆ.

ಮಾಸಿಕ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನ 129ನೇ ಸಂಚಿಕೆ ಇಂದು(ಭಾನುವಾರ) ದೇಶದಾದ್ಯಂತ ಪ್ರಸಾರವಾಯಿತು. ಇದು ಈ ವರ್ಷದ ಕೊನೆಯ ಸಂಚಿಕೆ ಆಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ಮೋದಿ, 2025ನೇ ಸಾಲಿನಲ್ಲಿ ಭಾರತ ವಿವಿಧ ಕ್ಷೇತ್ರ ಗಳಲ್ಲಿ ಮಾಡಿದ ಸಾಧನೆಗಳನ್ನೂ ಸ್ಮರಿಸಿದ್ದಾರೆ.

## ಕಾಂಗ್ರೆಸ್ ಕೇವಲ ರಾಜಕೀಯ ಪಕ್ಷ ಅಲ್ಲ, ಭಾರತದ ಆತ್ಮ

• ಪ್ರಜೋದಯ ವರದಿ



**ನವದೆಹಲಿ:** ಕಾಂಗ್ರೆಸ್ ಕೇವಲ ರಾಜಕೀಯ ಪಕ್ಷ ಅಲ್ಲ, ಭಾರತದ ಆತ್ಮ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಹೇಳಿದ್ದಾರೆ.

ಕಾಂಗ್ರೆಸ್‌ನ 140ನೇ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ ರಾಹುಲ್ ಗಾಂಧಿ ಈ ಕುರಿತು ಮಾತ ನಾಡಿ ಅವರು, ಕಾಂಗ್ರೆಸ್ ಕೇವಲ ರಾಜಕೀಯ ಪಕ್ಷವಲ್ಲ. ಬದಲಾಗಿ ದುರ್ಬಲ, ವಂಚಿತ ಮತ್ತು ಶ್ರಮಿ ಕ ರೊಂದಿಗೆ ನಿಂತಿರುವ ಭಾರತದ ಆತ್ಮದ ಧ್ವನಿಯಾಗಿದೆ ಎಂದು ರಾಹುಲ್ ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲೂ ರಾಹುಲ್ ಪೋಸ್ಟ್ ಮಾಡಿದ್ದು, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ, ಸಂವಿಧಾನಕ್ಕೆ ಅಡಿಪಾಯ ಹಾಕಿಕೊಟ್ಟ, ಪ್ರಜಾಪ್ರಭುತ್ವ ಜಾತ್ಯತೀತತೆ, ಸಾಮಾಜಿಕ ನ್ಯಾಯ ಮತ್ತು ಸಮಾನ ತೆಯ ಮೌಲ್ಯಗಳನ್ನು ಬಲಪಡಿಸಿದ ಮಹಾನ್ ತ್ಯಾಗಿ ಗಳಿಗೆ ನಾವು ಗೌರವ ನಮನ ಸಲ್ಲಿಸುತ್ತೇವೆ ಎಂದು ಬರೆದುಕೊಂಡಿದ್ದಾರೆ.

ಸತ್ಯಕ್ಕಾಗಿ ಮತ್ತು ದ್ವೇಷ, ಅನ್ಯಾಯ, ಸರ್ವಾ ಧಿಕಾರದ ವಿರುದ್ಧ ಸಂವಿಧಾನವನ್ನು ರಕ್ಷಿಸಲು ಇನ್ನಷ್ಟು ಪ್ರಬಲವಾಗಿ ಹೋರಾಡುವ ಸಂಕಲ್ಪವನ್ನು ಹೊಂದಿದ್ದೇ ವೆಂದು ಹೇಳಿದ್ದಾರೆ.

## ಹಾಸನ ಪಿಯು ಕಾಲೇಜಿನಲ್ಲಿ ಆಹಾರ ಮೇಳ ಯಶಸ್ವಿ



• ಪ್ರಜೋದಯ ವರದಿ

**ಅರಕಲಗೂಡು:** ವಿದ್ಯಾರ್ಥಿಗಳಿಗೆ ವ್ಯಾವ ಹಾರಿಕ ಜ್ಞಾನ ಬೆಳೆಸುವುದು ಅತ್ಯವಶ್ಯಕ ವೆಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯ ದರ್ಶಿ ಬಿ.ಕೆ.ಗಂಗಾಧರ್‌ಅವರು ಹೇಳಿದರು.

ಪಟ್ಟಣದ ಟೈಮ್ಸ್ ಹಾಸನ ಪಿಯು ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಆಹಾರ ಮೇಳಕ್ಕೆ ಚಾಲನೆ ನೀಡಿ ಮಾತನಾ ಡಿದ ಅವರು, ಇಂದಿನ ಆಧುನಿಕ ಪ್ರಪಂಚ ದಲ್ಲಿ ವ್ಯಾವಹಾರಿಕ ಜ್ಞಾನ ಮುಖ್ಯವಾಗಿದೆ. ವಿದ್ಯಾರ್ಥಿ ದಿಸೆಯಲ್ಲೇ ಕಲಿಯಲು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ವಿದ್ಯಾ ರ್ಥಿಗಳಲ್ಲಿ ವ್ಯವಹಾರಿಕ ಕೌಶಲ ಬೆಳೆಸುವ ಉದ್ದೇಶದಿಂದ ಆಹಾರ ಮೇಳ ಹಮ್ಮಿ ಕೊಂಡಿದ್ದು ವಿದ್ಯಾರ್ಥಿಗಳು ಅದರ ಉಪಯೋಗ ಪಡೆದು ತಮ್ಮ ಕೌಶಲ ಪ್ರದರ್ಶಿಸುವಂತೆ ತಿಳಿಸಿದರು.

ಪ್ರಾಂಶುಪಾಲ ಪಿ.ನವೀನ್ ಉಲಿವಾಲ ಅಧ್ಯಕ್ಷತೆ ವಹಿಸಿದ್ದರು. 14 ಮಳಿಗೆಗಳನ್ನು ತೆರೆದಿದ್ದ ವಿದ್ಯಾರ್ಥಿಗಳ ತಂಡ ತಾವೇ ತಯಾರಿಸಿ ತಂದ ಹೈದರಾಬಾದ್ ಬಿರಿಯಾನಿ, ಶಾವಿಗೆ, ಕಡುಬು, ಕೋಳಿ ಸಾರು, ನಿಪ್ಪಟ್ಟು, ಸಿಹಿ ತಿನಿಸು, ಪಾನಿಪೂರಿ, ಬರ್ಗರ್, ಪಾವ್ ಬಾಜಿ, ಬಜ್ಜಿ, ಐಸ್ ಕ್ರೀಂ, ಕಬಾಬ್, ಫಿಶ್ ಫ್ರೈ, ಪರೋಟ, ಜಾಮೂನು ಸೇರಿ ಹತ್ತು ಹಲವು ಸಸ್ಯಾ ಹಾರಿ ಮತ್ತು ಮಾಂಸಾಹಾರಿ ಖಾದ್ಯ ಹಾಗು ಚಾಟ್ಸ್‌ಗಳನ್ನು ಮಾರಾಟ ಮಾಡಿದರು.

ಪೋಷಕರು, ಸಹ ವಿದ್ಯಾರ್ಥಿಗಳು ತಿಂಡಿ, ತಿನಿಸುಗಳ ಖರೀದಿ ನಡೆಸಿ ಪ್ರೋತ್ಸಾ ಹಿಸಿದರು. ದ್ವಿತೀಯ ಪಿಯು ವಿದ್ಯಾರ್ಥಿನಿ ಯರು ಸೀರೆ, ವಿದ್ಯಾರ್ಥಿಗಳು ಪಂಚೆ ಶಲ್ಯ ಧರಿಸುವ ಮೂಲಕ ಆಹಾರ ಮೇಳಕ್ಕೆ ಮೆರುಗು ನೀಡಿದರು. ಹೆಚ್ಚಿನ ವಹಿವಾಟು ನಡೆಸಿದ ಮೂರು ತಂಡಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಉಪನ್ಯಾಸಕರಾದ ಕೃಷ್ಣಮೂರ್ತಿ, ಡಿ. ಮಧು, ಪ್ರಜ್ವಲ್, ಉದಯ್ ಕುಮಾರ್, ನಂದೀಶ್, ರಾಕೇಶ್, ಅರ್ಪಿತಾ, ರಿಯಾನ, ರೇಷ್ಮಾ, ಅನುಶ್ರೀ, ಭೂಮಿಕಾ, ಚಂದ್ರಶೇಖರ್ ಇದ್ದರು.

## ಸೇನೆಯ ಉಸ್ತುವಾರಿಯಲ್ಲಿ ಮೊದಲ ಹಂತದ ಚುನಾವಣೆ

• ಪ್ರಜೋದಯ ವರದಿ

**ಯಾಂಗೋನ್:** ಮ್ಯಾನ್ಮಾರ್‌ನಲ್ಲಿ ಐದು ವರ್ಷ ಗಳ ಬಳಿಕ ಸೇನೆಯ ಉಸ್ತುವಾರಿಯಲ್ಲಿ ನಡೆಯು ತ್ತಿರುವ ಸಾರ್ವತ್ರಿಕ ಚುನಾವಣೆಯ ಮೊದಲ ಹಂತದ ಮತದಾನವು ಭಾನುವಾರ ನಡೆಯಿತು.

ಇನ್ನೂ ಎರಡು ಹಂತದ ಮತದಾನಗಳ ಬಾಕಿ ಇದ್ದು, ಇದು ಜನವರಿಯಲ್ಲಿ ಪೂರ್ಣಗೊಳ್ಳಲಿದೆ. ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಚುನಾವಣೆ ನಡೆಸುತ್ತಿದ್ದೇವೆಂದು ಸೇನೆ ಹೇಳಿದೆ. ಆದರೆ ಚುನಾವಣೆಗೂ ಮುನ್ನ ಪ್ರಮುಖ ವಿರೋಧ ಪಕ್ಷಗಳನ್ನು ನಿಷೇಧಿಸ ಲಾಗಿದೆ. ಮತದಾನ ಬಹಿಷ್ಕರಿಸಿದವರಿಂದ ಬಲವಂತವಾಗಿ ಮತ ಹಾಕಿ ಸಲಾಗುತ್ತಿದೆಂದು ವರದಿಯಾಗಿದೆ. ಹೀಗಾಗಿ ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಯುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

ರಾಷ್ಟ್ರೀಯ ಮತ್ತು ಪ್ರಾದೇಶಿಕ ಶಾಸಕಾಂಗ ಸ್ಥಾನಗಳಿಗೆ 57 ಪಕ್ಷಗಳಿಂದ ಒಟ್ಟು 4,800ಕ್ಕೂ ಅಧಿಕ ಮಂದಿ ಸ್ಪರ್ಧಿಸಿದ್ದಾರೆ. ಆದರೆ ದೇಶ ದಾದ್ಯಂತ 6 ಪಕ್ಷಗಳು ಮಾತ್ರ ಸ್ಪರ್ಧೆ ನಡೆಸುತ್ತಿ ದ್ದಾವೆ.

2021ರಲ್ಲಿ ಚುನಾಯಿತ ಸರ್ಕಾರವನ್ನು ರದ್ದುಮಾಡಿ ಸೇನೆಯು ಅಧಿಕಾರವಹಿಸಿ ಕೊಂಡಿತ್ತು. ಈ ಬಗ್ಗೆ ತೀವ್ರ ಜನವಿರೋಧ ವ್ಯಕ್ತವಾಗಿತ್ತು.

## ಜಿಬಿಎ ಪಾಲಿಕೆ ಚುನಾವಣೆ: ಮಹಿಳಾ ಅಭ್ಯರ್ಥಿಗಳ ಅರ್ಜಿ ಶುಲ್ಕ ಇಳಿಕೆ

• ಪ್ರಜೋದಯ ವರದಿ




**ಬೆಂಗಳೂರು:** ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ಯಲ್ಲಿ ಉಮೇದುವಾರಿಕೆಗೆ ಅರ್ಜಿ ಸಲ್ಲಿಸುವ ಮಹಿಳಾ ಅಭ್ಯರ್ಥಿಗಳ ಶುಲ್ಕವನ್ನು ಕೆಪಿಸಿಸಿ 25,000ಕ್ಕೆ ಇಳಿಸಿದೆ.

ಪಕ್ಷದ ಕಚೇರಿಯಲ್ಲಿ ಭಾನು ವಾರ ನಡೆದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ಬಗ್ಗೆ ಘೋಷಣೆ ಮಾಡಿದರು.

ಪಾಲಿಕೆ ಚುನಾವಣೆಗೆ ಮಾಡಿಕೊಳ್ಳ ಬೇಕಾದ ಸಿದ್ಧತೆ ಬಗ್ಗೆ ಮಾತನಾಡುವಾಗ ಅವರು ಅರ್ಜಿ ಶುಲ್ಕದ ವಿಚಾರವನ್ನು ಪ್ರಸ್ತಾಪಿಸಿದರು. ಸಾಮಾನ್ಯ ಅಭ್ಯರ್ಥಿ ಗಳಿಗೆ 50,000, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳಿಗೆ 25,000 ಅರ್ಜಿ ಶುಲ್ಕ ನಿಗದಿ ಮಾಡಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿಭಾಗಿಯಾಗಿದ್ದ ಹಲವರು, ಮಹಿಳಾ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ರಿಯಾಯಿತಿ ನೀಡಬೇಕು ಎಂದು ಒತ್ತಾಯಿಸಿ ದರು. ಆಗ ಶಿವಕುಮಾರ್ ಅವರು, ಈಗಾಗಲೇ ಮಹಿಳೆಯರಿಗೆ ತಿಂಗಳಿಗೆ 2,000, ಬಸ್‌ನಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡಲಾಗಿದೆ. ಅರ್ಜಿ ಶುಲ್ಕದಲ್ಲಿ ರಿಯಾಯಿತಿ ನೀಡಲು ಸಾಧ್ಯವಿಲ್ಲ ಎಂದರು.

ವೇದಿಕೆಯಲ್ಲಿದ್ದ ಮುಖ್ಯಮಂತ್ರಿ ಸಿದ್ದ ರಾಮಯ್ಯ ಮತ್ತು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು, ಮಹಿಳಾ ಅಭ್ಯರ್ಥಿಗಳಿಗೆ ರಿಯಾಯಿತಿ ನೀಡಿ ಎಂದರು.

ಅದಕ್ಕೆ ಒಪ್ಪಿದ ಶಿವಕುಮಾರ್, ಮುಖ್ಯಮಂತ್ರಿ ಮತ್ತು ಸಚಿವ ಜಾರ್ಜ್ ಅವರು ಹೇಳುತ್ತಿದ್ದಾರೆಂದು ಅರ್ಜಿ ಶುಲ್ಕವನ್ನು 25,000ಕ್ಕೆ ಇಳಿಸುತ್ತಿದ್ದೇನೆ. ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ನೀಡ ಲಾಗಿದೆ. ಒಂದೊಂದು ಕ್ಷೇತ್ರದಿಂದಲೂ ಕನಿಷ್ಠ 10 ಮಹಿಳೆಯರು ಉಮೇದು ವಾರಿಕೆಗೆ ಅರ್ಜಿ ಸಲ್ಲಿಸಬೇಕು. ಚೆನ್ನಾಗಿ ಕೆಲಸ ಮಾಡಿರುವವರಿಗೆ ಪ್ರಾಮುಖ್ಯನೀಡಲಾಗುತ್ತದೆ ಎಂದರು.

## ನೂತನ ವೈಕುಂಠದ್ವಾರದ ಸಂಪ್ರೋಕ್ಷಣಾ ಕಾರ್ಯ

• ಪ್ರಜೋದಯ ವರದಿ



**ಅರಕಲಗೂಡು:** ಪಟ್ಟಣದ ಕೋಟೆ ಐತಿಹಾಸಿಕ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ವೈಕುಂಠದ್ವಾರದ ಸಂಪ್ರೋಕ್ಷಣಾ ಕಾರ್ಯವನ್ನು ಭಾನು ವಾರ ಹಮ್ಮಿಕೊಳ್ಳಲಾಗಿತ್ತು.

ಬೆಳಿಗ್ಗೆ ದೇವಾಲಯದಲ್ಲಿ ಮೂಲ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ ನಡೆಸಿ ದೇವತಾ ಪ್ರಾರ್ಥನೆ ಸಲ್ಲಿಸಲಾ ಯಿತು. ಬಳಿಕ ಪುಣ್ಯಾಹ, ಅಗ್ನಿ ಪ್ರತಿ ಷ್ಠಾಪನೆ ನಡೆಸಿ ನೂತನ ದ್ವಾರಕ್ಕೆವಾಸ್ತು ಹೋಮ, ಪಂಚಸೂಕ್ತ ಹೋಮ ನಡೆಸಿ ಪೂರ್ಣಾಹುತಿ ಸಲ್ಲಿಸಲಾ ಯಿತು. ಕದಳಿ ಛೇಧನ, ಗೋಪೂಜೆ ನಡೆಸಿ ಭಕ್ತರಿಗೆ ಪ್ರಸಾದ ವಿನಿಯೋಗ ನಡೆಸಲಾಯಿತು.

ಪುರೋಹಿತರಾದ ಶ್ರೀವತ್ಸ, ಎ. ಆರ್.ರವೀಶ್ ಪೂಜಾ ಕಾರ್ಯಗ ಳನ್ನು ನೆರವೇರಿಸಿದರು. ವೈಕುಂಠ ದ್ವಾರ ನಿರ್ಮಾಣದ ದಾನಿಗಳಾದ ಎ.ಎಸ್.ರವಿ, ಹೆಚ್.ಕೆ.ಸಾವಿತ್ರಿ, ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷ ನರಸಿಂಹಮೂರ್ತಿ, ಕಾರ್ಯದರ್ಶಿ ಜಿ.ರಮೇಶ್, ಕೃಷ್ಣಮೂರ್ತಿ ಭಾಗವಹಿಸಿದ್ದರು.

## ನಾಳೆ ಮಾಲೇಕಲ್ಲು ತಿರುಪತಿಯಲ್ಲಿ ವಿಶೇಷ ಪೂಜೆ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಸುಕ್ಷೇತ್ರ ಅಮರಗಿರಿ ಮಾಲೇಕಲ್ಲು ತಿರುಪತಿ ಯಲ್ಲಿ ಡಿ.30 ರಂದು ವೈಕುಂಠ ಏಕಾ ದಶಿ ಪ್ರಯುಕ್ತ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಹಶೀ ಲ್ದಾರ್ ಸಂತೋಷಕುಮಾರ್ ಅವರು ತಿಳಿಸಿದರು.


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ವರ್ಷ ಧನುರ್ಮಾಸ ವೈಕುಂಠ ಏಕಾದಶಿ ಗ್ರಾಮಸ್ಥರಿಗೆ ವಿಶೇಷ ದಿನವಾಗಿದೆ. ಕರವೇ ಅಧ್ಯಕ್ಷ ಟಿ.ಎ. ನಾರಾಯಣಗೌಡ ಮತ್ತು ಸಹೋದರರು ದೇವಸ್ಥಾನದ ಹೂವಿನ ಅಲಂಕಾರ ಸೇವಾರ್ಥದಾರರಾಗಿದ್ದು, ಸಾಮೂಹಿಕ ಅನ್ನ ಸಂತರ್ಪಣೆ ಹಮ್ಮಿ ಕೊಳ್ಳಲಾಗಿದೆ ಎಂದು ತಿಳಿಸಿದರು.

ದೇವಾಲಯದಲ್ಲಿ ವೈಕುಂಠ ಮಂಟಪ ನಿರ್ಮಿಸಲಾಗಿದ್ದು, ಲಕ್ಷ್ಮೀ ವೆಂಕಟರಮಣ ಸ್ವಾಮಿ, ಗೋವಿಂದ ರಾಜಸ್ವಾಮಿ, ಪದ್ಮಾವತಿದೇವಿ, ಸೂರ್ಯನಾರಾಯಣ,ಆಂಜನೇಯ, ಕೆಂಚರಾಯ ಸ್ವಾಮಿ, ಗುಂಡಮ್ಮ ದೇವಿ, ಬೆಟ್ಟದ ಮೇಲಿನ ವೆಂಕಟೇಶ್ವರ ಮತ್ತು ಮಹಾಲಕ್ಷ್ಮಿ ದೇವರಿಗೆ ವಿಶೇಷ ಅಲಂಕಾರ, ಪೂಜೆಗಳನ್ನು ನೆರವೇರಿಸಲಾಗುತ್ತದೆ ಎಂದರು.

ನಾದಸ್ವರ , ಕೊಳಲು ವಾದನ, ವಿವಿಧ ಭಜನಾ ತಂಡಗಳಿಂದ ದೇವರ ಭಕ್ತಿ, ದೇವರ ನಾಮ, ಗೀತೆಗಳ ಭಜನೆ ಆಯೋಜಿಸಲಾಗಿದೆ. ನಗರದಿಂದ ಶ್ರೀ ಕ್ಷೇತ್ರಕ್ಕೆ ಕೆ.ಎಸ್.ಆರ್.ಟಿ.ಸಿ. ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ. ಆರ್ಯ ವೈಶ್ಯ ಮಂಡಳಿಯಿಂದ ಅನ್ನ ಸಂತ ರ್ಪಣೆ ಆಯೋಜಿಸಲಾಗಿದೆ ಎಂದು ಆಡಳಿತ ಮಂಡಳಿ ತಿಳಿಸಿದೆ.

## ಬ್ಯಾಡ್ಮಿಂಟನ್: ಶಿಖಾ-ಅಶ್ವಿನಿ ಜೋಡಿಗೆ ಡಬಲ್ಸ್ ಪ್ರಶಸ್ತಿ

• ಪ್ರಜೋದಯ ವರದಿ



**ವಿಜಯವಾಡ:** ಅನುಭವಿ ಜೋಡಿ ಯಾದ ಶಿಖಾ ಗೌತಮ್ ಮತ್ತು ಅಶ್ವಿನಿ ಭಟ್ ಕೆ. ಅವರು ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಪ್ರಿಯಾ ದೇವಿ ಕೊಂಜೆಗ್ಬಾಮ್-ಶ್ರುತಿ ಮಿಶ್ರಾ ಜೋಡಿಯನ್ನು ನೇರ ಗೇಮ್‌ಗಳಿಂದ ಸೋಲಿಸಿ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳಾ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಅಂತಿಮ ಪಂದ್ಯದಲ್ಲಿ ಮೂರನೇ ಶ್ರೇಯಾಂಕ ಪಡೆದಿದ್ದ ಕರ್ನಾಟಕದ ಶಿಖಾ ಅಶ್ವಿನಿ ಜೋಡಿ 21-14, 21-18 ರಿಂದ ಮಣಿಪುರದ ಪ್ರಿಯಾದೇವಿ ಉತ್ತರ ಪ್ರದೇಶದ ಶ್ರುತಿ ಮಿಶ್ರಾ ಅವರನ್ನು ಸೋಲಿಸಿತು.

**ರಿತ್ವಿಕ್, ಸೂರ್ಯ ಚಾಂಪಿಯನ್ಸ್**

ವಿಜಯವಾಡದ 19 ವರ್ಷ ವಯಸ್ಸಿನ ಸೂರ್ಯ ಚರಿಷ್ಮ ತಮಿರಿ ಅವರು 17-21, 21-12, 21-14 ರಿಂದ ಒಡಿಶಾದ ತನ್ವಿ ಪತ್ರಿ ಅವರನ್ನು ಸೋಲಿಸಿ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿ ಕೊಂಡರು.

2024 ಒಡಿಶಾ ಮಾಸ್ಟರ್ಸ್ ವಿಜೇತ ರಿತ್ವಿಕ್ ಸಂಜೀವಿ (ತಮಿಳುನಾಡು) ಅವರು ಫೈನಲ್‌ನಲ್ಲಿ ತಮ್ಮ ಅಮೋಘ ರಕ್ಷಣೆಯ ಆಟದ ಬಲದಿಂದ ಹರಿಯಾಣದ ಭರತ್ ಭಾರ್ಗವ್ ಅವರನ್ನು 21-16, 22-20 ರಿಂದ ಸೋಲಿಸಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

## ಆಪರೇಷನ್ ಸಿಂಧೂರ, ಬಂಕರ್‌ನಲ್ಲಿ ಅಡಗಲು ಸಲಹೆ ನೀಡಿದ್ದರು : ಪಾಕ್ ಅಧ್ಯಕ್ಷ

• ಪ್ರಜೋದಯ ವರದಿ

**ಲಾಹೋರ್:** ಭಾರತವು ಆಪರೇಷನ್ ಸಿಂಧೂರ ಕಾರ್ಯಾಚರಣೆ ಕೈಗೊಂಡ ಸಂದರ್ಭದಲ್ಲಿ ಬಂಕರ್‌ನಲ್ಲಿ ಅಡಗಿ ಕೂರಲು ಸಲಹೆ ಬಂದಿತ್ತು ಎಂದು ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಬಹಿರಂಗಪಡಿಸಿದ್ದಾರೆ.

ಜರ್ದಾರಿ ಅವರ ಪತ್ನಿ, ಮಾಜಿ ಪ್ರಧಾನಿ ಬೆನಜಿರ್ ಭುಟ್ಟೊ ಅವರ ಪುಣ್ಯ ಸ್ಮರಣೆ ಅಂಗವಾಗಿ ಸಿಂಧ್ ಪ್ರಾಂತ್ಯದ ಲರ್ಕಾನಾದಲ್ಲಿ ಆಯೋಜಿ ಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 2007ರಲ್ಲಿ ನಡೆದ ಬಾಂಬ್ ಮತ್ತು ಬಂದೂಕು ದಾಳಿ ಯಲ್ಲಿ ಭುಟ್ಟೊ ಅವರು ಮೃತ ಪಟ್ಟಿದ್ದಾರೆ.

ಸರ್ ಯುದ್ಧ ಆರಂಭವಾಗಿದೆ. ಬಂಕರ್ ಒಳಗೆ ಹೋಗೋಣ ಎಂದು ನನ್ನ ಸೇನಾ ಕಾರ್ಯದರ್ಶಿ ಹೇಳಿ ದರು. ಆಗ ನಾನು, ಸಾವು ಬರುವು ದಾದರೆ ಇಲ್ಲಿಗೇ ಬರಲಿ. ನಾಯಕರು ಬಂಕರ್‌ಗಳಲ್ಲಿ ಸಾಯ ಬಾರದು, ಯುದ್ಧ ಭೂಮಿಯಲ್ಲಿ ಸಾಯಬೇಕು ಎಂದು ಹೇಳಿದೆ ಎಂದು ವಿವರಿಸಿದರು.

ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರ ವಾಗಿ ಭಾರತವು ಮೇ 7ರಂದು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸಿತ್ತು. ಬಳಿಕ ಉಭಯ ದೇಶಗಳ ಮಧ್ಯೆ ನಾಲ್ಕು ದಿನ ತೀವ್ರ ಸಂಘರ್ಷ ಏರ್ಪಟ್ಟಿತ್ತು.

## ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಗಡಿ ದಾಟಿದ ಸ್ಮೃತಿ ಮಂದಾನ




• ಪ್ರಜೋದಯ ವರದಿ

**ತಿರುವನಂತಪುರ:** ಭಾರತ ಮಹಿಳಾ ಕ್ರಿಕೆಟ್ ತಾರೆ ಸ್ಮೃತಿ ಮಂದಾನ ಅವರು ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಗಡಿ ದಾಟಿದ್ದಾರೆ.

ಶ್ರೀಲಂಕಾ ವಿರುದ್ಧದ ಸರಣಿಯ ನಾಲ್ಕನೇ ಪಂದ್ಯದಲ್ಲಿ 27 ರನ್ ಗಳಿಸಿದ್ದಾಗ, ಸ್ಮೃತಿ ಮಂದಾನ ಈ ಸಾಧನೆ ಮಾಡಿದರು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 157 ಟಿ-20 ಪಂದ್ಯಗಳಿಂದ 4,094 ರನ್, 117 ಏಕದಿನ ಪಂದ್ಯಗಳಲ್ಲಿ 5,322 ರನ್ ಹಾಗೂ 7 ಟೆಸ್ಟ್ ಪಂದ್ಯಗಳಿಂದ 629 ರನ್ ಗಳಿಸಿದ್ದಾರೆ. ಅದರಲ್ಲಿ 17 ಶತಕಗಳು ಕೂಡ ಸೇರಿವೆ.

ಮಹಿಳಾ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ನಾಲ್ಕನೇ ಆಟಗಾರ್ತಿಯಾಗಿದ್ದಾರೆ. ಭಾರತದ ಪರ ಈ ದಾಖಲೆ ಬರೆದ ಎರಡನೇ ಬ್ಯಾಟರ್ ಎನ್ನುವ ಖ್ಯಾತಿಗೆಸ್ಮೃತಿ ಭಾಜನರಾಗಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಎನ್ನುವ ದಾಖಲೆಯು ಭಾರತದ ಮಾಜಿ ನಾಯಕಿ ಮಿಥಾಲಿ ರಾಜ್ (10,868 ರನ್) ಅವರ ಹೆಸರಿ ನಲ್ಲಿದೆ. ಅವರ ನಂತರ ನ್ಯೂಜಿಲೆಂಡ್‌ನ ಸುಜಿ ಬೇಟ್ (10,652 ರನ್) ಹಾಗೂ ಇಂಗ್ಲೆಂಡ್‌ನ ಷಾರ್ಲೆಟ್ ಎಡ್ವರ್ಡ್ಸ್ (10,273 ರನ್) ಅವರು 10 ಸಾವಿರ ರನ್ ಗಡಿ ದಾಟಿದ್ದಾರೆ.

ವೆಸ್ಟ್ ಇಂಡೀಸ್‌ನ ಬ್ಯಾಟರ್ ಸ್ಟಾಫಾನಿ ಟೇಲರ್ (9,301 ರನ್) ಹಾಗೂ ಆಸೀಸ್ ಬ್ಯಾಟರ್ ಮೆಗ್ ಲ್ಯಾನಿಂಗ್ (8,352 ರನ್) ಅವರು ಮಹಿಳಾ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್‌ಗಳಿಸಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಸ್ಮೃತಿ ಮಂದಾನ ಅವರ ನಂತರದ ಸ್ಥಾನದಲ್ಲಿದ್ದಾರೆ.

## ಸುನೀತಾ ಮಂಜುನಾಥ್ ನೇಮಕ



• ಪ್ರಜೋದಯ ವರದಿ

**ಹಾಸನ:** ವಿವಿಧ ಕಸುಬುದಾರರ ಕಾರ್ಮಿಕರ ಸಂಘದ ಹಾಸನ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾಗಿ ಸುನೀತಾ ಮಂಜುನಾಥ್ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷ ರವಿತೇಜಸ್ ಅವರು ತಿಳಿಸಿದ್ದಾರೆ.

ಸುನೀತಾ ಮಂಜುನಾಥ್ ವೃತ್ತಿ ಯಲ್ಲಿ ನರ್ಸ್ ಆಗಿ ಕಾರ್ಯ ನಿರ್ವಹಿ ಸುತ್ತಿದ್ದು, ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರು ತ್ತಾರೆ. ಶಿವಲೀಲಾ ಕನ್ನಡ ಚಲನಚಿತ್ರ ದಲ್ಲಿ ನಟಿಸಿದ್ದು, ಚುಟುಕು ಸಾಹಿತಿ ಯಾಗಿರುವ ಅವರನ್ನು ನೇಮಿಸ ಲಾಗಿದೆ ಎಂದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ.ನಂ.ಲೋಕೇಶ, ರಾಜ್ಯ ಉಪಾಧ್ಯಕ್ಷ ವೇಣು, ಮಹೇಶ್ ಬೇಲೂರ್, ಮಂಜುಳಾ ಪಾವಗಡ, ಆಲಿಲ್‌ಗಾರ್ಡನ್ ಅಧ್ಯಕ್ಷ ಲೋಕೇಶ್, ವೆಂಕಟೇಶ್ ಅಭಿನಂದಿಸಿದ್ದಾರೆ.

## ಆರ್‌ಎಸ್‌ಎಸ್, ಬಿಜೆಪಿ ಸಂಘಟನಾ ಚಾತುರ್ಯ ಹೊಗಳಿಕೆ

### ದಿಗ್ವಿಜಯ್ ಕುಟುಕಿದ ಕೈ ನಾಯಕರು

• ಪ್ರಜೋದಯ ವರದಿ



**ನವದೆಹಲಿ:** ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಅವರು ಆರ್‌ಎಸ್ ಎಸ್ ಮತ್ತು ಬಿಜೆಪಿಯ ಕಾರ್ಯ ವೈಖರಿ, ಸಂಘಟನಾ ಚಾತುರ್ಯ ಹೊಗಳಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಬೆನ್ನಲ್ಲೇ, ಸ್ವಪಕ್ಷೀ ಯರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

140 ವರ್ಷಗಳ ಇತಿಹಾಸ ಹೊಂದಿ ರುವ ಪಕ್ಷವು ವಿಭಜಕ ಶಕ್ತಿ ಯೊಂದರಿಂದ ಕಲಿಯುವುದು ಏನೂ ಇಲ್ಲ ಎಂದು ಕಾಂಗ್ರೆಸ್ ನಾಯಕರಾದ ಪವನ್ ಖೇರಾ ಹಾಗೂ ಮಾಣಿಕಂ ಟ್ಯಾಗೋರ್ ಕುಟುಕಿದ್ದರೆ, ಹಿರಿಯ ನಾಯಕ ಶಶಿ ತರೂರ್, ಪಕ್ಷದ ಸಂಘ ಟನೆಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಹೇಳುವ ಮೂಲಕ ದಿಗ್ವಿಜಯ್ ಸಿಂಗ್ ಅವರ ಮಾತಿಗೆ ದನಿಗೂಡಿಸಿದ್ದಾರೆ.

ಆರ್‌ಎಸ್‌ಎಸ್‌ನಿಂದ ಕಾಂಗ್ರೆಸ್ ಪಕ್ಷ ಕಲಿಯುವಂಥದ್ದು ಏನೂ ಇಲ್ಲ. ಅದರಲ್ಲೂ, ಮಹಾತ್ಮ ಗಾಂಧಿ ಅವ ರಿಂದ ಮರುಸಂಘಟನೆಯಾಗಿ ರುವ ಪಕ್ಷವು ಆರ್‌ಎಸ್‌ಎಸ್‌ನಿಂದ ಏನು ಕಲಿಯಬೇಕಿದೆ ಎಂದು ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಪ್ರಶ್ನಿಸಿದ್ದಾರೆ.

ಅದರಲ್ಲೂ, ಪಕ್ಷದ ಕಾರ್ಯ ಕ್ರಮವೊಂದರ ಬಳಿಕ ರಾಹುಲ್ ಗಾಂಧಿ ಅವರು, ನಿನ್ನೆ ನೀವು ನಿಮ್ಮ ಕೆಲಸ ಮಾಡಿ ದಿರಿ ಎಂಬುದಾಗಿ ದಿಗ್ವಿಜಯ್ ಸಿಂಗ್ ಉದ್ದೇಶಿಸಿ ಹೇಳಿ ದ್ದರು. ಅದರ ಬೆನ್ನಲ್ಲೇ ಪಕ್ಷದ ನಾಯ ಕರು ದಿಗ್ವಿಜಯ್ ಸಿಂಗ್ ಅವರನ್ನು ಕುಟುಕುವಂಥ ಪ್ರತಿಕ್ರಿಯೆಗಳನ್ನು ನೀಡಿದ್ದಾರೆ.

ರಾಹುಲ್ ಗಾಂಧಿ ಅವರ ನಿಗೂಢ ಪ್ರತಿಕ್ರಿಯೆಯನ್ನು ಕಾಂಗ್ರೆಸ್ ನಾಯ ಕರು ಹಲವು ರೀತಿಯಲ್ಲಿ ವಿಶ್ಲೇಷಿಸುತ್ತಿ ದ್ದಾರೆ. ಒಂದೆಡೆ, ಪಕ್ಷದ ಸಂಘಟನೆ ಬಲಪಡಿಸುವ ವಿಚಾರವಾಗಿ ವ್ಯಕ್ತವಾದ ಕಳಕಳಿಯನ್ನು ರಾಹುಲ್ ಗಾಂಧಿ ಸಕಾರಾತ್ಮಕವಾಗಿ ತೆಗೆದು ಕೊಂಡಿದ್ದಾರೆ ಎನ್ನಲಾಗುತ್ತಿದೆ. ಮತ್ತೊಂದೆಡೆ, ಕಾಂಗ್ರೆಸ್ ಮತ್ತು ಆರ್‌ಎಸ್‌ಎಸ್‌ನ ಕಾರ್ಯವೈಖರಿ ಹೋಲಿಕೆ ಮಾಡಿದ್ದಕ್ಕಾಗಿ ರಾಹುಲ್ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ ಎಂದು ವಿಶ್ಲೇಷಿಸಲಾ ಗುತ್ತಿದೆ.

ಕಾಂಗ್ರೆಸ್‌ನಲ್ಲಿ ಆಂತರಿಕವಾಗಿ ಸುಧಾರಣೆಗಳ ಅಗತ್ಯವಿದೆ ಎಂದು ಪ್ರತಿಪಾದಿಸಿ ದಿಗ್ವಿಜಯ್ ಸಿಂಗ್ ಅವರು ವಾರದ ಹಿಂದೆಯಷ್ಟೇ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದರು. ಅದರ ಬೆನ್ನಲ್ಲೇ ಆರ್‌ಎಸ್‌ಎಸ್ ಮತ್ತು ಬಿಜೆಪಿಯನ್ನು ಹೊಗಳಿ ಅವರು ಪೋಸ್ಟ್ ಮಾಡಿದ್ದರು.

ಸಿಂಗ್ ಅವರು ತಮ್ಮ ಈ ಪೋಸ್ಟ್ ಅನ್ನು ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಖಾತೆಗಳಿಗೆ, ಎಐಸಿಸಿ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ, ಸಂಸದರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಟ್ಯಾಗ್ ಮಾಡಿದ್ದರು.

### ಸಿಂಗ್‌ಗೆ ತರೂರ್ ಬೆಂಬಲ




ದಿಗ್ವಿಜಯ್ ಸಿಂಗ್ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಮತ್ತೊಬ್ಬ ಮುಖಂಡ ಶಶಿ ತರೂರ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ಭಾನುವಾರ ನಡೆದ ಪಕ್ಷದ 140ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ತರೂರ್, ದಿಗ್ವಿಜಯ್ ಸಿಂಗ್ ಅವರ ಪಕ್ಕದ ಆಸನದಲ್ಲಿ ಕುಳಿತಿದ್ದರಲ್ಲದೇ, ಅವರೊಂದಿಗೆ ಮಾತುಕತೆಯಲ್ಲಿ ತೊಡಗಿ ಗಮನ ಸೆಳೆದರು. ದಿಗ್ವಿಜಯ್ ಸಿಂಗ್ ಅವರ ಹೇಳಿಕೆ ಕುರಿತಂತೆ ಪತ್ರಕರ್ತರು ಕೇಳಿದ ಪ್ರಶ್ನೆಗೆ, ಪಕ್ಷದ ಸಂಘಟನೆಯನ್ನು ಬಲಪಡಿಸ ಬೇಕು. ಅದರಲ್ಲಿ ಯಾವುದೇ ಸಂಶಯ ಇಲ್ಲ ಎಂದು ತರೂರ್ ಪ್ರತಿಕ್ರಿಯಿಸಿದರು. ನೀವು ದಿಗ್ವಿಜಯ್ ಸಿಂಗ್ ಪಕ್ಕದಲ್ಲಿಯೇ ಕುಳಿತಿದ್ದಿರಿ. ಅವರ ಹೇಳಿಕೆ ವಿಚಾರವಾಗಿ ಮಾತುಕತೆ ನಡೆಯಿತೇ ಎಂಬ ಮತ್ತೊಂದು ಪ್ರಶ್ನೆಗೆ, ನಾವು ಸ್ನೇಹಿತರು. ಉಭಯಕುಶಲೋಪರಿ ಇದ್ದೇ ಇರುತ್ತದೆಂದು ಉತ್ತರಿಸಿದರು.

## ನಿಯಮ ಪಾಲಿಸಿದ ಬಳಿಕ ಉಪಗ್ರಹ ಸಂವಹನ

• ಪ್ರಜೋದಯ ವರದಿ



**ನವದೆಹಲಿ:** ಸ್ಟಾರ್‌ಲಿಂಕ್ ಸೇರಿ ಉಪಗ್ರಹ ಆಧಾರಿತ ಸಂವಹನ ಸೇವೆ ಒದಗಿಸುವ ಕಂಪನಿಗಳು ಭದ್ರತಾ ನಿಯಮ ಪಾಲಿಸಿದ ಬಳಿಕ ದೇಶದಲ್ಲಿ ಉಪ್ರಗಹ ಆಧಾರಿತ ಸಂವಹನ ಸೇವೆ ಆರಂಭವಾಗಲಿದೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿ ರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ದೂರಸಂಪರ್ಕ ಇಲಾಖೆಯು ತರಾಂಗತರ ಬೆಲೆಯನ್ನು ಅಂತಿಮಗೊಳಿಸಿದ ನಂತರ ಉಪಗ್ರಹ ಆಧಾರಿತ ಸಂವಹನಸೇವೆ ಒದಗಿಸುವ ಸ್ಟಾರ್‌ಲಿಂಕ್, ಯುಟೆಲ್‌ಸ್ಯಾಟ್ ಒನ್ ಮತ್ತು ಜಿಯೊ ಎಸ್‌ಜಿಎಸ್‌ಗೆ ತರಂಗಾಂತರವನ್ನು ಹಂಚಿಕೆ ಮಾಡಲಾಗುವುದು ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಒನ್‌ವೆಬ್, ರಿಲಯನ್ಸ್ ಜಿಯೊ ಮತ್ತು ಸ್ಟಾರ್ ಲಿಂಕ್ ಭದ್ರತಾ ಸಂಸ್ಥೆಗಳು ನಿಗದಿಪಡಿಸಿದ ನಿಯ ಮಗಳನ್ನು ಪಾಲಿಸಿ ಸೇವೆ ಆರಂಭಿಸಲು ಅನುಮತಿ ಪಡೆದುಕೊಳ್ಳಬೇಕು ಮತ್ತು ಭಾರತ ದಲ್ಲಿಯೇ ದತ್ತಾಂಶ ಉಳಿಯುವುದನ್ನು ಖಚಿತಪಡಿಸಿಕೊಳ್ಳ ಬೇಕು ಎಂದು ಹೇಳಿದ್ದಾರೆ.

ಈಗಾಗಲೇ ಈ ಕಂಪನಿಗಳಿಗೆ ತಾತ್ಕಾಲಿಕ ತರಂ ಗಾಂತರ ಹಂಚಿಕೆ ಮಾಡಲಾಗಿದೆ. ದೂರ ಸಂಪರ್ಕ ಇಲಾಖೆ ಮತ್ತು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ತರಂ ಗಾಂತರ ಬೆಲೆಯನ್ನು ಅಂತಿಮಗೊಳಿಸುವ ಪ್ರಕ್ರಿಯೆ ನಡೆದಿದೆ. ಇದು ಶೀಘ್ರದಲ್ಲಿ ಮುಕ್ತಾಯಗೊಳ್ಳಲಿದೆ ಎಂದು ಸಚಿವರು ಹೇಳಿದ್ದಾರೆ.

ಟ್ರಾಯ್ ಮತ್ತು ದೂರಸಂಪರ್ಕ ಇಲಾಖೆಯು ಉಪಗ್ರಹ ಆಧಾರಿತ ಸಂವಹನದ ತರಂ ಗಾಂತರಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿವೆ. ಉಪಗ್ರಹ ಆಧಾರಿತ ಸೇವೆ ಒದಗಿಸುವ ಕಂಪನಿ ಗಳಿಗೆ ವಾರ್ಷಿಕ ತರಂ ಗಾಂತರ ಶುಲ್ಕವನ್ನು ಶೇ.4ರ ಬದಲು ಶೇ.5ರಷ್ಟು ವಿಧಿಸುವುದು ಸೇರಿ ಹಲವು ಸಲಹೆಗಳನ್ನು ದೂರಸಂಪರ್ಕ ಇಲಾಖೆ ನೀಡಿತ್ತು. ಈ ಸಲಹೆಗಳನ್ನು ಈ ತಿಂಗಳ ಆರಂಭದಲ್ಲಿ ಟ್ರಾಯ್ ತಿರಸ್ಕರಿಸಿದೆ.

ದೂರಸಂಪರ್ಕ ವಲಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅತ್ಯುನ್ನತ ಸಂಸ್ಥೆಯಾದ ಡಿಜಿಟಲ್ ಸಂವಹನ ಆಯೋಗವು (ಡಿಸಿಸಿ) ತರಂಗಾಂತರದ ಬೆಲೆ ನಿರ್ಧರಿಸಿದ ಬಳಿಕ, ಅದಕ್ಕೆ ಕೇಂದ್ರ ಸಚಿವ ಸಂಪುಟದ ಅನುಮೋದನೆ ಸಿಗ ಬೇಕಿದೆ ಎಂದಿದ್ದಾರೆ.

**ವೊಡಾಫೋನ್ ಐಡಿಯಾಗೆ ಪರಿಹಾರ ನೀಡಿಲ್ಲ :** ವೊಡಾಫೋನ್ ಐಡಿಯಾ (ವಿಐಎಲ್) ಕೋರಿರುವ ಪರಿಹಾರ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ಸಚಿವರು, ಈ ವರ್ಷದ ಆರಂಭದಲ್ಲಿ ವೊಡಾಫೋನ್ ಐಡಿಯಾ ಕಂಪನಿಯು ದೂರ ಸಂಪರ್ಕ ಇಲಾಖೆಗೆ ಬರೆದ ಪತ್ರದಲ್ಲಿ ತಾನು ಸರ್ಕಾರಕ್ಕೆ 2 ಲಕ್ಷ ಕೋಟಿ ಸಾಲ ಮರುಪಾವತಿಸ ಬೇಕಿದೆ ಎಂದು ತಿಳಿಸಿದೆ ಎಂದಿದ್ದಾರೆ.

ಇದುವರೆಗೆ ಕಂಪನಿಗೆ ಯಾವುದೇ ಪರಿಹಾರ ನೀಡಿಲ್ಲ. ಕಂಪನಿಯಿಂದ ಬರಬೇಕಿರುವ ಬಾಕಿ ಯನ್ನು ಷೇರುಗಳಾಗಿ ಪರಿವರ್ತನೆ ಮಾಡಿಕೊಳ್ಳ ಲಾಗಿದೆ. ಪ್ರಸ್ತುತ ಕಂಪನಿಯಲ್ಲಿ ಶೇ. 49ರಷ್ಟು ಪಾಲನ್ನು ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

ಕಂಪನಿಗೆ ಪರಿಹಾರ ನೀಡದಿದ್ದರೆ, 2026ರ ಮಾರ್ಚ್ ವೇಳೆಗೆ ಕಂಪನಿಯು 18 ಸಾವಿರ ಕೋಟಿ ಪಾವತಿಸಬೇಕಿದೆ. ಇಷ್ಟೇ ಮೊತ್ತವನ್ನು ಮುಂದಿನ 6 ವರ್ಷಗಳ ಕಾಲ ಪ್ರತಿ ವರ್ಷವೂ ಪಾವತಿಸಬೇಕಾಗುತ್ತ ದೆಂದು ಹೇಳಿದ್ದಾರೆ.

C M Y K C M Y K C M Y K C M Y K

# ತಾಲ್ಲೂಕು ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

## ಮೂರು ವರ್ಷಗಳ ಅವಧಿಯ ಚುನಾವಣೆ | ಬಹುತೇಕ ಕಡೆ ಅವಿರೋಧ

**ನೂತನ ಪದಾಧಿಕಾರಿಗಳಿಗೆ ಇಂದು ಅಭಿನಂದನಾ ಸಮಾರಂಭ**

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧೀನದ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘಗಳಿಗೆ ಭಾನುವಾರ ಚುನಾವಣೆ ನಡೆಯಿತು. 2025-28ರ ಅವಧಿಯ ಚುನಾವಣೆ ಇದಾಗಿದ್ದು, ಕೆಲವು ತಾಲ್ಲೂಕುಗಳಲ್ಲಿ ಕೆಲ ಸ್ಥಾನಗಳಿಗೆ ಚುನಾವಣೆ ನಡೆದರೆ, ಬಹುತೇಕ ಕಡೆ ಅವಿರೋಧ ಆಯ್ಕೆ ನಡೆದಿದೆ. ಡಿ. 29ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನೂತನ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕು ಸಂಘದ ಅಧ್ಯಕ್ಷರಾಗಿ ದಯಾನಂದ್ ಶೆಟ್ಟಿಹಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಪ್ರಜೋದಯ ಪತ್ರಿಕೆ ವರದಿಗಾರ ಆರ್.ಶ್ರೀನಿವಾಸ್ ಉಳ್ಳಾವಳ್ಳಿ ಚುನಾಯಿತರಾದರೆ ಖಜಾಂಚಿ, ಉಪಾಧ್ಯಕ್ಷ ಸ್ಥಾನ 2, ಸಹ ಕಾರ್ಯದರ್ಶಿ 2 ಸ್ಥಾನ ಹಾಗು 4 ನಿರ್ದೇಶಕ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು.

ಉಪಾಧ್ಯಕ್ಷರಾಗಿ ನಂದನ್ ಪುಟ್ಟಣ್ಣ, ಕೆ.ಪಿ.ಪುಟ್ಟರಾಜು, ಸಹ ಕಾರ್ಯದರ್ಶಿಯಾಗಿ ಜೈ ಕುಮಾರ್, ನಾಗೇಂದ್ರ ರಾಯ, ಖಜಾಂಚಿಯಾಗಿ ಎ.ಎಲ್. ನಾಗೇಶ್, ನಿರ್ದೇಶಕರಾಗಿ ಎ.ಎಂ.ಜಯರಾಮ್, ಎ. ನಟೇಶ್, ಪಾಂಡುರಂಗ ಮತ್ತು ವೆಂಕಟಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಗಳಾಗಿ ಹಿರೀಸಾವೆ ಪ್ರತಾಪ್ ಮತ್ತು ಕೃಷ್ಣ ಇಬ್ಬೀಡು ಕರ್ತವ್ಯ ನಿರ್ವಹಿಸಿದರು.



### ಅರಸೀಕೆರೆಗೆ ಆನಂದ್ ಅಧ್ಯಕ್ಷ

ಅರಸೀಕೆರೆ ತಾಲ್ಲೂಕು ಸಂಘದ ಅಧ್ಯಕ್ಷರಾಗಿ ಪ್ರಜೋದಯ ಪತ್ರಿಕೆಯ ವರದಿಗಾರ ಟಿ.ಆನಂದ್, ಉಪಾಧ್ಯಕ್ಷರಾಗಿ ಮಾಡಾಳು ಸೋಮಶೇಖರ್, ಹೇಮಂತ್ ಕುಮಾರ್ ಹಾಗು ಪ್ರಧಾನ ಕಾರ್ಯದರ್ಶಿಯಾಗಿ ಎಸ್.ವಿ.ನವೀನ್ ಕುಮಾರ್ ಚುನಾಯಿತರಾಗಿದ್ದಾರೆ. ಕಾರ್ಯದರ್ಶಿ ಸ್ಥಾನಕ್ಕೆ ಪುಟ್ಟಪ್ಪ ಶಶಿವಾಳು, ಟಿ.ಎ.ಸ್ವಾಮಿ, ಖಜಾಂಚಿಯಾಗಿ ಎಂ.ಎಸ್. ನಂದೀಶ್ ಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಟಿ.ಎಂ.ಜಗದೀಶ್, ಜೆ.ಎನ್.ರಂಗನಾಥ್, ಜೆ.ಎಸ್. ರವಿಶಂಕರ್, ವಿ.ಸತೀಶ್, ಸೈಯದ್ ಸಾದಿಕ್, ಕೆ.ಪಿ.ವೀರಭದ್ರಚಾರ್, ಬಿ.ಎಂ.ಸತೀಶ್, ಎಸ್. ವಿಜಯ ಕುಮಾರ್ ಅವಿರೋಧ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಜಿಲ್ಲಾ ಸಂಘದ ಉಪಾಧ್ಯಕ್ಷ ಎನ್. ನಂಜುಂಡೇಗೌಡ ಹಾಗು ಸಹಾಯಕ ಚುನಾವಣಾಧಿಕಾರಿಯಾಗಿ ಎಂ.ಜಿ. ಸ್ವರೂಪ್ ಕಾರ್ಯ ನಿರ್ವಹಿಸಿದರು.

### ಲಾಟರಿಯಲ್ಲಿ ಗೆದ್ದ ಶಿವಕುಮಾರ್

ಅರಕಲಗೂಡು ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಪಿ. ಶಿವಕುಮಾರ್ ಆಯ್ಕೆಯಾದರು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಟಿ. ವಿಜಯಕುಮಾರ್ ಮತ್ತು ಪಿ. ಶಿವಕುಮಾರ್ ಅವರಿಗೆ ಸಮ ಪ್ರಮಾಣದಲ್ಲಿ ಮತಗಳು ಚಲಾವಣೆ ಯಾದ ಹಿನ್ನಲೆಯಲ್ಲಿ ಲಾಟರಿ ಮೂಲಕ ಶಿವಕುಮಾರ್ ಆಯ್ಕೆಯಾದರು.

ಉಪಾಧ್ಯಕ್ಷರಾಗಿ ದೇವಕಿ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿಯಾಗಿ ಗಣೇಶ್ ಶೆಟ್ಟಿ, ಕಾರ್ಯದರ್ಶಿ ಕೆ.ವಿ.ಸತೀಶ್, ಖಜಾಂಚಿಯಾಗಿ ರವಿ ಬೆಟ್ಟಸೋಗೆ, ನಿರ್ದೇಶಕರಾಗಿ ಸಂತೋಷಗೌಡ, ಡಿ.ಎನ್. ರಾಜೇಂದ್ರ, ಕುಮಾರ್, ಎಂ.ಬಿ. ಸಾಹಸ್, ಬಿ.ಎ.ರಘು, ಕೆ.ಆರ್. ಶ್ರೀನಿವಾಸ್, ಬಿ.ಸಿ.ಜಯಕುಮಾರ್ ಅವಿರೋಧ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಖುಶ್ವಂತ್, ಸಹಾಯಕ ಚುನಾವಣಾಧಿಕಾರಿಯಾಗಿ ಹೆಚ್.ಎಸ್.ಶರತ್ ಕಾರ್ಯನಿರ್ವಹಿಸಿದರು.



### ಸಕಲೇಶಪುರದಲ್ಲಿ ಅವಿರೋಧ ಆಯ್ಕೆ

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ 2025-28ನೇ ಸಾಲಿಗೆ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಕಾಂತರಾಜ್ ಹೊನ್ನೆಕೋಡಿ, ಉಪಾಧ್ಯಕ್ಷರಾಗಿ ಎಸ್.ಎಲ್.ಸುಧೀರ್, ನವೀನ್ ಸದಾ, ಪ್ರಧಾನ ಕಾರ್ಯದರ್ಶಿಯಾಗಿ ಪ್ರಜೋದಯ ಪತ್ರಿಕೆಯ ಅಕ್ಬರ್ ಜುನೈದ್, ಕಾರ್ಯದರ್ಶಿಗಳಾಗಿ ಪ್ರವೀಣ್ ಹಾಗು ನವೀನ್, ಖಜಾಂಚಿಯಾಗಿ ಯೋಗೇಶ್ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹೆತ್ತೂರು ರವಿ, ಜಗದೀಶ್ ಹೊರಟ್ಟಿ, ವಿನಯ್ ವನಗೂರು, ನಿರಂಜನ್ ಮೂರ್ತಿ, ಚೇತನ್ ಹರಗರಹಳ್ಳಿ, ಶಿವಕುಮಾರ್, ಅರ್ಜುನ್ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ನವೀನ್ ಕರ್ತವ್ಯ ನಿಬಾಯಿಸಿದರು.

### ಆಲೂರು ಸಂಘದಲ್ಲೂ ಅವಿರೋಧ

ತಾಲ್ಲೂಕು ಪತ್ರಕರ್ತರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಆದಿಲ್ ಪಾಷ ಸೇರಿ ಎಲ್ಲಾ ಹುದ್ದೆಗಳಿಗೆ ಅವಿರೋಧ ಆಯ್ಕೆ ನಡೆದಿದೆ. ಉಪಾಧ್ಯಕ್ಷರಾಗಿ ಬಿ.ಎನ್.ನವೀನ್‌ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ರುದ್ರ ಕುಮಾರ್, ಕಾರ್ಯದರ್ಶಿ ಸತೀಶ್ ಚಿಕ್ಕಕಣಗಾಲು, ಖಜಾಂಚಿ ಹೆಚ್.ವಿ. ಚೇತನ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಬೀರ್ ಅಹಮದ್, ಹೆಚ್.ವೈ.ವಿಶ್ವನಾಥ್, ಎಂ.ಪಿ. ಚಿದಾನಂದ, ಪ್ರದೀಪ, ವೀರಭದ್ರಸ್ವಾಮಿ, ಸಲೀಂ ಪಾಷ, ಹೆಚ್.ಡಿ.ಪ್ರದೀಪ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ಜಿ. ಪ್ರಕಾಶ್ ಮತ್ತು ಚಲಂ ಹಾಡ್ಲಹಳ್ಳಿ ಘೋಷಿಸಿದರು.


ಹೊಳೆನರಸೀಪುರ ಸಂಘದ ಅಧ್ಯಕ್ಷರಾಗಿ ಹೆಚ್.ಬಿ.ವೆಂಕಟೇಶ್, ಉಪಾಧ್ಯಕ್ಷರಾಗಿ ಡಿ.ಕೆ. ವಸಂತಯ್ಯ, ಪ್ರಧಾನ ಕಾರ್ಯದರ್ಶಿಯಾಗಿ ರಾಮಕೃಷ್ಣ ಚುನಾಯಿತರಾದರೆ ಖಜಾಂಚಿಯಾಗಿ ಎಲ್.ಚಂದ್ರಶೇಖರ್, ಕಾರ್ಯದರ್ಶಿಯಾಗಿ ಹೆಚ್.ಡಿ.ಅಭಿಲಾಷ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಭಾನುಮತಿ, ಕೆ.ಎಸ್.ಚಂದ್ರು, ಧನಂಜಯ್, ಎಸ್.ವಿಶ್ವನಾಥ್ ಮತ್ತು ಹೆಚ್.ಟಿ. ಸುದರ್ಶನ್ ಅವಿರೋಧ ಆಯ್ಕೆಯಾದರು. ಕೆ.ಎಂ.ಹರೀಶ್ ಮತ್ತು ಹೆಚ್.ಎ.ನಾಗರಾಜ್ ಚುನಾವಣಾ ಜವಾಬ್ದಾರಿ ನಿರ್ವಹಿಸಿದರು.

ಬೇಲೂರು ಸಂಘದ ಅಧ್ಯಕ್ಷರಾಗಿ ಬಿ.ಬಿ.ಶಿವರಾಜು, ಉಪಾಧ್ಯಕ್ಷರಾಗಿ ಎಂ.ಸಿ.ಕುಮಾರ್ ಮತ್ತು ಆರ್. ವೆಂಕಟೇಶ್ ಅವಿರೋಧ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಬಿ.ಎಲ್. ಲಕ್ಷ್ಮಣ್, ಖಜಾಂಚಿಯಾಗಿ ಬಿ.ಆರ್. ಲೋಹಿತ್ ಚುನಾಯಿತರಾದರು. ಕಾರ್ಯದರ್ಶಿಯಾಗಿ ಬಿ.ಎನ್. ಗಣೇಶ್ ಮತ್ತು ದಿನೇಶ್ ಬೆಳ್ಳಾವರ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಇಬ್ಬೀಡು ರಮೇಶ್, ರವಿ ಹೊಳ್ಳ, ಬಿ.ಎಸ್.ಆರಾಧ್ಯ, ಬಿ.ಎಂ. ಜಗದೀಶ್, ವಿಜಯಕುಮಾರ್, ಚಂದ್ರಶೇಖರ್ ಮತ್ತು ತೇಜಸ್ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಗಳಾಗಿ ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್ ಹಾಗು ಜಿ.ಶರಣ್ ಕಾರ್ಯನಿರ್ವಹಿಸಿದರು.

---

# ಪಾಕಿಸ್ತಾನದ ನೂರ್ ಖಾನ್ ವಾಯುನೆಲೆ ಮೇಲೆ ಭಾರತ ದಾಳಿ ಸತ್ಯ

• ಪ್ರಜೋದಯ ವರದಿ



**ನವದೆಹಲಿ:** ಭಾರತವು 2025ರ ಮೇ ತಿಂಗಳಲ್ಲಿ ನಡೆಸಿದ ಆಪರೇಷನ್ ಸಿಂದೂರ ಸಮಯದಲ್ಲಿ ನೂರ್ ಖಾನ್ ವಾಯು ನೆಲೆಯ ಮೇಲೆ ದಾಳಿ ನಡೆದಿತ್ತು ಎಂದು ಪಾಕಿಸ್ತಾನ ಮೊದಲ ಬಾರಿಗೆ ಒಪ್ಪಿಕೊಂಡಿದೆ.

ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾವಲ್ಪಿಂಡಿಯ ಚಕ್ಲಾಲಾದಲ್ಲಿರುವ ನೂರ್ ಖಾನ್ ವಾಯು ನೆಲೆಯನ್ನು ಗುರಿಯಾಗಿಸಿ ಭಾರತೀಯ ಡ್ರೋನ್‌ಗಳು ದಾಳಿ ನಡೆಸಿವೆ. ಈ ದಾಳಿಯಿಂದ ಮಿಲಿಟರಿ ಮೂಲಸೌಕರ್ಯ ಹಾನಿಯಾಗಿದ್ದು ಮಾತ್ರವಲ್ಲದೆ, ಅಲ್ಲಿದ್ದ ಸಿಬ್ಬಂದಿ ಗಾಯಗೊಂಡಿದ್ದರೆಂದರು.

ಭಾರತವು 36 ಗಂಟೆಗಳಲ್ಲಿ ಪಾಕಿಸ್ತಾನದ ಮೇಲೆ ಒಟ್ಟು 80 ಡ್ರೋನ್ ಕಳುಹಿಸಿತ್ತು. ಅದರಲ್ಲಿ 79 ಡ್ರೋನ್‌ಗಳನ್ನು ತಡೆಹಿಡಿಯಲಾಯಿತು. ಒಂದು ಡ್ರೋನ್ ನೂರ್ ಖಾನ್ ವಾಯುನೆಲೆಯನ್ನು ಗುರಿಯಾಗಿಸಿಕೊಂಡಿತು. ಮೇ 10ರ ಬೆಳಿಗ್ಗೆ ದಾಳಿ ನಡೆದಿತ್ತು ಎಂದು ಅವರು ಹೇಳಿದ್ದಾರೆ. ಈ ಘಟನೆಯ ನಂತರ, ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ನೇತೃತ್ವದಲ್ಲಿ ನಾಗರಿಕ ಮತ್ತು ಮಿಲಿಟರಿ ನಾಯಕತ್ವದ ತುರ್ತು ಸಭೆಯನ್ನು ಕರೆಯಲಾಯಿತು ಎಂದರು.

ನೂರ್ ಖಾನ್ ವಾಯುನೆಲೆ ಪಾಕಿಸ್ತಾನ ವಾಯುಪಡೆಯ ಪ್ರಮುಖ ನೆಲೆಯಾಗಿದ್ದು, ಸರ್ಗೋಧಾ, ರಫೀಕಿ, ಜಾಕೋಬಾಬಾದ್ ಮತ್ತು ಮುರಿಡ್ಕೆ ಸೇರಿ ಆಪರೇಷನ್ ಸಿಂದೂರ ಸಮಯದಲ್ಲಿ 11 ವಾಯುನೆಲೆಗಳನ್ನು ಗುರಿಯಾಗಿಸಲಾಗಿತ್ತು ಎಂದು ವರದಿಯಾಗಿದೆ. ಭಾರತೀಯ ಸಶಸ್ತ್ರ ಪಡೆಗಳು ಮೇ 7 ರಂದು ಕಾರ್ಯಾಚರಣೆ ಪ್ರಾರಂಭಿಸಿದವು. ಆರಂಭದಲ್ಲಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಒಂಬತ್ತು ಭಯೋತ್ಪಾದಕ ಅಡಗುತಾಣಗಳನ್ನು ನಾಶಪಡಿಸಿತ್ತು.

ಭಾರತೀಯ ಸೇನೆಯ ನಿವೃತ್ತ ಲೆಫ್ಟಿನೆಂಟ್ ಜನರಲ್ ಕೆಜೆಎಸ್ ಧಿಲ್ಲೋನ್ ಅವರು, ಪಾಕಿಸ್ತಾನದ ಸೀಮಿತ ನಷ್ಟಗಳ ಹಕ್ಕುಗಳನ್ನು ತಿರಸ್ಕರಿಸಿದರು. ಪಾಕಿಸ್ತಾನಿ ಮಾಧ್ಯಮ ವರದಿಗಳು ಸ್ವತಃ ಕಾರ್ಯಾಚರಣೆಯಲ್ಲಿ ಹತ್ಯೆಯಾದ ಸಿಬ್ಬಂದಿಯನ್ನು ಉಲ್ಲೇಖಿಸುತ್ತವೆಂದು ಹೇಳಿದರು.

---

# ಹೊಸಳಿಗಮ್ಮ ಶಕ್ತಿ ದೇವತೆಗೆ ಈಡುಗಾಯಿ ಒಡೆದ ಭಕ್ತರು

• ಪ್ರಜೋದಯ ವರದಿ



**ಅರಕಲಗೂಡು:** ತಾಲೂಕಿನ ರಾಮನಾಥಪುರ ಪ್ರಸನ್ನ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಸನ್ನಿಧಿಯಲ್ಲಿರುವ ಶ್ರೀ ಹೊಸಳಿಗಮ್ಮ ಶಕ್ತಿ ದೇವತೆಗೆ ಭಕ್ತರು ಸಾವಿರಾರು ಈಡುಗಾಯಿ ಒಡೆದು ಭಕ್ತಿ ಮೆರೆದರು.

ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥೋತ್ಸವ ಸುಸೂತ್ರವಾಗಿ ಸಾಗಿದ ಹಿನ್ನಲೆಯಲ್ಲಿ ಶನಿವಾರ ರಾತ್ರಿ ದೇವಸ್ಥಾನದವರು ಹಾಗು ಭಕ್ತರು ಸೇರಿ ಸಾವಿರಾರು ಈಡುಗಾಯಿ ಒಡೆದರು. ಸುಕ್ಷೇತ್ರದಲ್ಲಿ ಕಳೆದ ತಿಂಗಳು ನ.26 ರಂದು ಹಾಗು ಡಿ.26 ರಂದು ಶ್ರೀ ಸುಬ್ರಹ್ಮಣ್ಯಸ್ವಾಮಿ ಮಹಾ ರಥೋತ್ಸವ ಹಾಗು ಎರಡನೇ ತುಳು ಸೃಷ್ಟಿ ಮಹಾ ರಥೋತ್ಸವ ನಂತರ ಮಾರನೇ ದಿವಸ ಮುಕ್ತಾಯದ ಶ್ರೀ ಪ್ರಸನ್ನ ಸುಬ್ರಮಣ್ಯ ಸ್ವಾಮಿಯವರ ದೇವಾಲಯದ ಸಭಾಂಗಣದಲ್ಲಿರುವ ಶಕ್ತಿ ದೇವತೆಯಾದ ಹೊಸಳಿಗಮ್ಮನವರಿಗೆ ಈ ಹಿಂದಿನ ಎಲ್ಲಾ ಕಾರ್ಯಗಳು ಸುಸೂತ್ರವಾಗಿ ನಡೆದಿರುವುದಕ್ಕೆ ಭಕ್ತರು ಸುಮಾರು 2 ಸಾವಿರ ತೆಂಗಿನ ಕಾಯಿ ಒಡೆದರು.


ಬ್ರಹ್ಮಶ್ರೀ ತಂತ್ರಸಾರ ಆಗಮ ಕುಶಲ ಭಾರತೀರಮಣ, ಪಾರುಪತ್ತೇಗಾರ್ ರಮೇಶ್ ಭಟ್, ಅರ್ಚಕರಾದ ರಾಘವೇಂದ್ರ ಭಟ್, ಶ್ರೀನಾಥ್, ಕಾರ್ತಿಕ್ ಸೋಮಯಾಜಿ, ತ್ರಿವಿಕ್ರಮ್, ಪ್ರಹ್ಲದ್, ಸುಮಿತ, ಪ್ರಸನ್ನ, ಶ್ರೀವಿಷ್ಣು, ರಾಮಚಂದ್ರ ಭಟ್, ನಾಗರಾಜು ಪೂಜೆಯಲ್ಲಿ ಭಾಗವಹಿಸಿದ್ದರು.

---

# ಕೋಗಿಲೆ ಸಮೀಪ ಅಕ್ರಮ ಕಟ್ಟಡಗಳ ನೆಲಸಮ

## ಕೇರಳದ ಹಸ್ತಕ್ಷೇಪ ಖಂಡನೀಯ : ಬಿಜೆಪಿ

• ಪ್ರಜೋದಯ ವರದಿ



**ಬೆಂಗಳೂರು:** ಕೋಗಿಲು ಸಮೀಪ ಅಕ್ರಮ ಕಟ್ಟಡಗಳ ನೆಲಸಮ ವಿಚಾರದಲ್ಲಿ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅಲ್ಲಿನ ಸಂಸದ ಕೆ.ಸಿ.ವೇಣುಗೋಪಾಲ್ ಅವರು ಮಧ್ಯೆ ಪ್ರವೇಶಿಸಿರುವುದು ಖಂಡನೀಯ ಎಂದು ಬಿಜೆಪಿ ರಾಜ್ಯ ಘಟಕದ ನಾಯಕರು ಆಕ್ಷೇಪಿಸಿದ್ದಾರೆ.

ಅಕ್ರಮವಾಗಿ ಮನೆ ಕಟ್ಟಿಕೊಂಡ ಮುಸ್ಲಿಮರ ಪರವಾಗಿ ಕೇರಳದ ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ನಾಯಕರು ಒಂದಾಗಿದ್ದಾರೆ. ಕರ್ನಾಟಕದ ವಿಷಯದಲ್ಲಿ ತಲೆ ಹಾಕಲು ಇವರು ಯಾರು? ಒಂದು ಕಡೆ ಪಿಣರಾಯಿ ವಿಜಯನ್‌ಗೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆ.ಸಿ. ವೇಣುಗೋಪಾಲ್‌ಗೆ ಅದೇ ರೀತಿ ತಿರುಗೇಟು ಏಕೆ ನೀಡಿಲ್ಲ ಎಂದೂ ಪ್ರಶ್ನಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಈ ಕುರಿತು ಎಕ್ಸ್ ಮಾಡಿದ್ದು, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ಆಯ್ಕೆ ಮಾಡಿರುವುದು ಕರ್ನಾಟಕದವರಾ ಅಥವಾ ಕೇರಳದವರಾ? ಸರ್ಕಾರದ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡು ಕೇರಳದ ಮುಖ್ಯಮಂತ್ರಿಗೆ ಉತ್ತರ ನೀಡಿರುವ ನೀವು ಎಐಸಿಸಿಯ ನಿಮ್ಮ ಬಾಸ್ ವೇಣು ಗೋಪಾಲ್ ಅವರಿಗೆ ಅದೇ ಧಾಟಿಯಲ್ಲಿ ಉತ್ತರ ನೀಡುವ ಧೈರ್ಯ ಮತ್ತು ತಾಕತ್ತು ಇದೆಯಾ ಅಥವಾ ದೆಹಲಿಯಿಂದ ಕರೆ ಬಂದ ಬಳಿಕ ನಿಮ್ಮ ನಿಲುವು ಬದಲಿಸಿದ್ದೀರಾ ಎಂದೂ ಅವರು ಪ್ರಶ್ನಿಸಿದ್ದಾರೆ.

ದೆಹಲಿಯಲ್ಲಿ ತೆರೆಮರೆಯಲ್ಲಿ ಕುಳಿತು ನಿರ್ದೇಶನ ನೀಡುವವರು ನಿಮ್ಮನ್ನು ಗೆಲ್ಲಿಸಿದ್ದಲ್ಲ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ಕುರ್ಚಿ ಕದನದಲ್ಲಿ ನಿರತರಾಗಿದ್ದಾರೆ. ಹೀಗಾಗಿ ಕರ್ನಾಟಕದಲ್ಲಿ ಏನಾಗಬೇಕೆಂಬ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿರುವುದು ದೆಹಲಿಯೇ ಹೊರತು ಬೆಂಗಳೂರು ಅಲ್ಲ ಎಂದು ಕುಟುಕಿದ್ದಾರೆ.

ರಾಜ್ಯ ಕಾಂಗ್ರೆಸ್ ನಾಯಕರು ದೆಹಲಿಯಲ್ಲಿನ ಕಾಣದ ಕೈಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದರಿಂದ ಆಡಳಿತ ಯಂತ್ರ ಕುಸಿದು ಹೋಗಿದೆ ಮತ್ತು ರಿಮೋಟ್ ಕಂಟ್ರೋಲ್ ಮಾತುಗಳೇ ನಡೆಯುತ್ತಿದೆ. ಕರ್ನಾಟಕಕ್ಕೆ ಉತ್ತರದಾಯಿತ್ವ ಇರುವ ನಾಯಕತ್ವ ಬೇಕೇ ಹೊರತು, ಹೈಕಮಾಂಡ್‌ನ ಕೀಲಿ ಕೊಟ್ಟ ಬೊಂಬೆಯಂತೆ ಕುಣಿಯುವವರು ಬೇಕಿಲ್ಲ ಎಂದು ಹೇಳಿದ್ದಾರೆ.

### ಕೇರಳ ಚುನಾವಣೆ ಮೇಲೆ ಕಣ್ಣು

ಕೇರಳ ಚುನಾವಣೆಯಲ್ಲಿ ಮುಸ್ಲಿಮರ ಮತ ದಕ್ಕಿಸಿಕೊಳ್ಳಲು ಅಕ್ರಮ ಮನೆಗಳ ಧ್ವಂಸ ಪ್ರಕರಣವನ್ನು ಅಲ್ಲಿನ ರಾಜಕಾರಣಿಗಳು ಬಳಸಿಕೊಳ್ಳುತ್ತಿದ್ದಾರೆಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಆರೋಪಿಸಿದ್ದಾರೆ.

ಈ ಹಿಂದೆ ವಯನಾಡಿನಲ್ಲಿ ಆನೆ ದಾಳಿಯಲ್ಲಿ ಮೃತಪಟ್ಟ ವ್ಯಕ್ತಿಗೆ 30 ಲಕ್ಷ ಪರಿಹಾರ ನೀಡಿದ್ದ ರಾಜ್ಯ ಸರ್ಕಾರ, ಈಗ ಕೇರಳ ಚುನಾವಣೆ ಕಾರಣಕ್ಕೆ ರಾಜ್ಯದ ಮರ್ಯಾದೆ ಯನ್ನೇ ಬೀದಿ ಪಾಲು ಮಾಡಿದೆ. ಕರ್ನಾಟಕದ ಬಂಡೆ ಸರ್ಕಾರವನ್ನು ಕೇರಳದ ಕಮ್ಯುನಿಸ್ಟ್ ಸರ್ಕಾರ ಬುಲ್ಡೋಜರ್ ಅಡಿಯಲ್ಲಿ ಹಾಕಿ ರೋಲ್ ಮಾಡಿದರೂ ಸಹಿಸಿಕೊಂಡಿರುವ ಕಾಂಗ್ರೆಸ್‌ನ ವೀರಕನ್ನಡಿಗರಿಗೆ ಭೇಷ್ ಅನ್ನಲೇಬೇಕು ಬಿಡಿ ಎಂದು ವ್ಯಂಗ್ಯವಾಡಿದ್ದಾರೆ.

---

# ಸಿನಿಮಾ ಕ್ಷೇತ್ರದಿಂದ ಬ್ರಾಹ್ಮಣರ ಕೊಡುಗೆ ತೆರೆ ಮರೆಗೆ

» **ಮೊದಲನೇ ಪುಟದಿಂದ**



ಹಾಗು ಬರೆಯದೆ ಉಳಿದ ಇತಿಹಾಸ ಸಾಕಷ್ಟಿವೆ ಎಂದು ವಿಶ್ಲೇಷಿಸಿದರು.

1945ರಲ್ಲೇ ಕನ್ನಡದ ಮೊದಲ ಆರ್ಕೆಸ್ಟ್ರಾ ತಂಡವನ್ನು ಕಟ್ಟಿದವರು ಸಹ ಬ್ರಾಹ್ಮಣರೇ ಎಂಬುದು ಬಹುತೇಕರಿಗೆ ಗೊತ್ತಿಲ್ಲ. ಚಿತ್ರರಂಗದ ಸಾಹಿತ್ಯ ಲೋಕದ ತ್ರಿಮೂರ್ತಿಗಳಾದ ಚಿ. ಉದಯಶಂಕರ್, ವಿಜಯನರಸಿಂಹ ಹಾಗು ಆರ್.ಎನ್. ಜಯಗೋಪಾಲ್ ಮತ್ತು ಕಣಗಾಲ್ ಪ್ರಭಾಕರ ಶಾಸ್ತ್ರಿಗಳ ಕೊಡುಗೆ ಅಪಾರವಾಗಿದೆ. ಗಾಯನ ದಿಗ್ಗಜರಾದ ಪಿ.ಬಿ. ಶ್ರೀನಿವಾಸ್ ಹಾಗು ಎಸ್.ಪಿ. ಬಾಲಸುಬ್ರಹ್ಮಣ್ಯಂ, ಸಂಗೀತ ನಿರ್ದೇಶಕರಾದ ಎಂ. ರಂಗರಾವ್ ಮತ್ತು ಉಪೇಂದ್ರ ಕುಮಾರ್ ಅವರು ನಮ್ಮ ಸಮುದಾಯದವರೇ ಎಂಬುದು ಹೆಮ್ಮೆಯ ವಿಷಯವೆಂದರು.

ಚಿ.ಉದಯಶಂಕರ್ ಅವರು ಪರಮ ದತ್ತಾತ್ರೇಯ ಭಕ್ತರಾಗಿದ್ದು, ಯಾವುದೇ ಗೀತೆ ಬರೆಯುವ ಮೊದಲು ದತ್ತಾತ್ರೇಯ ಪ್ರಾರ್ಥನೆ ಮಾಡುತ್ತಿದ್ದರೆಂಬ ಶ್ರದ್ಧೆಯ ಸಂಗತಿಯನ್ನು ವಿವರಿಸಿದರು. ನಿರ್ದೇಶನ ವಿಭಾಗದಲ್ಲಿ ಹುಣಸೂರು ಕೃಷ್ಣಮೂರ್ತಿ ಅವರು ಬಬ್ರುವಾಹನ ಮತ್ತು ಸತ್ಯಹರಿಶ್ಚಂದ್ರದಂತಹ ಮೇರು ಚಿತ್ರಗಳ ಮೂಲಕ ಅಮರರಾಗಿದ್ದಾರೆ. ಚಿತ್ರರಂಗದಲ್ಲಿರುವ ಬ್ರಾಹ್ಮಣರನ್ನು ಬ್ರಾಹ್ಮಣತ್ವದ ಮೌಲ್ಯಗಳನ್ನು ಉಳಿಸಿಕೊಂಡವರು ಮತ್ತು ಕೇವಲ ಹುಟ್ಟಿನಿಂದ ಬ್ರಾಹ್ಮಣರಾದವರೆಂದು ಎರಡು ವರ್ಗಗಳಲ್ಲಿ ವಿಶ್ಲೇಷಿಸಿ, ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಕಿರು ತೆರೆ ನಿರ್ಮಾಪಕ ಹಾಗು ನಟ ಕಿರಣ್ ವಟಿ ಅವರು ಮಾತನಾಡಿ, ರಂಗಭೂಮಿ, ಸಿನಿಮಾ ಹಾಗು ಧಾರಾವಾಹಿ ಕ್ಷೇತ್ರಗಳಲ್ಲಿ ಕೆಲಸ ಮಾಡುವಾಗ ನಮ್ಮ ಸಮುದಾಯದವರೇ ಶೇ. 0ರಷ್ಟು ಮಂದಿ ಇರುತ್ತಾರೆ. ಆದರೆ, ಉಳಿದ ಶೇ.30ರಷ್ಟು ಜನರ ಹೆಸರು ಮಾತ್ರ ಮುನ್ನೆಲೆಗೆ ಬರುತ್ತದೆ. ಬ್ರಾಹ್ಮಣರು ಸದಾ ಇನ್ನೊಬ್ಬರ ಸಂತೋಷಕ್ಕಾಗಿ ಹಾಗು ಹೆಸರಿಗಿಂತ ಹೆಚ್ಚಾಗಿ ಕಲೆಯ ಮೇಲಿನ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆಂದರು.

ಈ ಕ್ಷೇತ್ರಗಳಲ್ಲಿ ನಮ್ಮವರು ಸಾಕಷ್ಟು ಕೆಲಸ ಮಾಡುತ್ತಿದ್ದರೂ ಅವರು ಯಾರೆಂಬುದೇ ಅರಿಯದ ಸ್ಥಿತಿ ಇದೆ. ವಿಪ್ರರು ಹಣ ಅಥವಾ ವೈಯಕ್ತಿಕ ಪ್ರಸಿದ್ಧಿಗಾಗಿ ಕೆಲಸ ಮಾಡದೆ, ಅತ್ಯಂತ ಶ್ರದ್ಧೆಯಿಂದ ಪೂರೈಸುತ್ತಾರೆ. ಪ್ರಸ್ತುತ ಮನೋರಂಜನಾ ಉದ್ಯಮದಲ್ಲಿ ಪ್ರತಿಭಾವಂತ ಲೇಖಕರ ಕೊರತೆ ಎದ್ದು ಕಾಣುತ್ತಿದ್ದು, ಸಮುದಾಯದ ಯುವ ಪ್ರತಿಭೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬರವಣಿಗೆಯ ಕ್ಷೇತ್ರಕ್ಕೆ ಬರಬೇಕೆಂದು ಕರೆ ನೀಡಿದರು.

ಗೋಷ್ಠಿಯ ಅಧ್ಯಕ್ಷತೆಯನ್ನು ಎಂ.ಕೆ. ರಮೇಶ್ ವಹಿಸಿದ್ದರು. ವೇದಿಕೆಯಲ್ಲಿ ಅರಸೀಕೆರೆ ಬ್ರಾಹ್ಮಣ ಸಭಾ ಅಧ್ಯಕ್ಷ ಎಸ್.ರವಿಕುಮಾರ್, ಜಿಲ್ಲಾ ಬ್ರಾಹ್ಮಣ ಸಭಾ ಉಪಾಧ್ಯಕ್ಷ ಎಂ.ಕೆ.ರಮೇಶ್ ಇದ್ದರು.

---

# ಮಕ್ಕಳಿಗೆ ಭಗವದ್ಗೀತೆ ಬೋಧನೆಯ ಅವಶ್ಯಕತೆ ಇದೆ

» **ಮೊದಲನೇ ಪುಟದಿಂದ**

ಧೈರ್ಯವನ್ನು ಕಲಿಸಬೇಕು. ನಮ್ಮ ಪರಂಪರೆಯಲ್ಲಿ ಅಧ್ಯಾತ್ಮ ಮತ್ತು ವಿಜ್ಞಾನ ಬೇರೆಯಲ್ಲ. ಧಾರ್ಮಿಕತೆಯಲ್ಲೇ ವಿಜ್ಞಾನವಿದೆ ಎಂಬುದನ್ನು ಪೋಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ಮಕ್ಕಳು ದಾರಿ ತಪ್ಪಿದಾಗ ಕೇವಲ ಶಿಸ್ತಿನ ಮೂಲಕ ವಲ್ಲದೆ, ಆತ್ಮೀಯ ಸಂಬಂಧದ ಮೂಲಕ ಅವರನ್ನು ಸರಿಹಾದಿಗೆ ತರಬೇಕೆಂದು ಕಿವಿಮಾತು ಹೇಳಿದರು.

ಬ್ರಾಹ್ಮಣ ಸಮುದಾಯವು ಕೇವಲ ಸೇವೆಯನ್ನೇ ಮಾಡದೆ ವೃತ್ತಿಗೆ ತಕ್ಕ ಬೆಲೆ ಪಡೆಯುವ ಗುಣ ಬೆಳೆಸಿಕೊಳ್ಳಬೇಕು. ಉದ್ಯಮಶೀಲತಾ ಕೌಶಲಗಳನ್ನು ಮೈಗೂಡಿಸಿ ಕೊಳ್ಳಬೇಕೆಂದರು.

ವೇದಿಕೆಯಲ್ಲಿ ರಾಮಕೃಷ್ಣ ವಿದ್ಯಾಲಯದ ಮುಖ್ಯಸ್ಥೆ ಲಕ್ಷ್ಮಿ, ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಹೆಚ್.ಎಸ್. ಮಂಜುನಾಥಮೂರ್ತಿ, ಉಪಾಧ್ಯಕ್ಷ ಚಂದ್ರಶೇಖರ್, ಹೊಳೆನರಸೀಪುರ ತಾಲ್ಲೂಕು ಅಧ್ಯಕ್ಷ ಕೆ.ಆರ್.ಜಯಪ್ರಕಾಶ್, ಬಿ.ಎನ್. ರಾಮಪ್ರಸನ್ನ ಪಟ್ಟಾಭಿರಾಮ್ ಇತರರಿದ್ದರು.

---

# ಉ.ಪ್ರ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ

**ಲಖನೌ:** ಉತ್ತರಪ್ರದೇಶದಲ್ಲಿ ಡಿ.31 ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಈ ಪಟ್ಟಿಯಲ್ಲಿ 12.55 ಕೋಟಿ ಮತದಾರರ ಹೆಸರು ಪ್ರಕಟಗೊಳ್ಳಲಿದೆ ಎಂದು ಹೇಳಲಾಗಿದೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪೂರ್ವ ಮತದಾರರ ಪಟ್ಟಿಯಿಂದ ಸರಿಸುಮಾರು 2.89 ಕೋಟಿ ಹೆಸರುಗಳನ್ನು ತೆಗೆದು ಹಾಕಲಾಗಿದೆ. ಪಟ್ಟಿಯಿಂದ ತೆಗೆದು ಹಾಕಿದವರ ಹೆಸರು ಗಳನ್ನು ಸೂಕ್ತ ದಾಖಲೆಗಳೊಂದಿಗೆ ಜ.1ರಿಂದ ಮತ್ತೆ ಸೇರ್ಪಡೆಗೊಳಿಸಲು ಅವಕಾಶವಿದೆ ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತರು ಭಾನುವಾರ ತಿಳಿಸಿದ್ದಾರೆ. ಲಖನೌ, ಗಾಜಿಯಾಬಾದ್, ಪ್ರಯಾಗ್‌ರಾಜ್ ಹಾಗೂ ಕಾನ್ಪುರದಲ್ಲಿ ಹೆಚ್ಚಿನ ಹೆಸರುಗಳನ್ನು ತೆಗೆದು ಹಾಕಲಾಗಿದೆ ಎಂದು ಅವರು ತಿಳಿಸಿದ್ದಾರೆ.

---

# ವಿಬಿ-ಜಿ-ರಾಮ್ : ಗಾಂಧೀಜಿ ಹೆಸರು ಅಳಿಸುವ ಹುನ್ನಾರ ಸೋಲಿಸೋಣ

• ಪ್ರಜೋದಯ ವರದಿ



**ಬೆಂಗಳೂರು:** ನರೇಗಾ ರದ್ದತಿ ಮೂಲಕ ಮಹಾತ್ಮ ಗಾಂಧಿ ಅವರ ಹೆಸರು ಅಳಿಸಲು ಕೇಂದ್ರ ಸರ್ಕಾರ ನಡೆಸಿರುವ ಹುನ್ನಾರವನ್ನು ಸೋಲಿಸೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಭಾನುವಾರ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕೇಂದ್ರದ ಈ ಜನವಿರೋಧಿ ನೀತಿಯ ವಿರುದ್ಧ ಜನಾಂದೋಲನ ರೂಪಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ನಿರ್ಧಾರ ಕೈಗೊಳ್ಳ ಲಾಗಿದೆ. ಈ ಪ್ರಕಾರ ಜನವರಿ 5ರಿಂದ, ಗ್ರಾಮ ಪಂಚಾಯಿತಿ ಮಟ್ಟದಿಂದ ರಾಜ್ಯ ಮಟ್ಟದವರೆಗೂ ತೀವ್ರ ಹೋರಾಟ ಸಂಘಟಿಸಲಾಗುವುದು ಎಂದರು.

ಮಹಾತ್ಮ ಗಾಂಧಿ ಅವರ ಹೆಸರಿನಲ್ಲಿ ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಈ ಯೋಜನೆಯಿಂದ ಗ್ರಾಮೀಣ ಭಾಗದ ಜನರಿಗೆ ಉದ್ಯೋಗದ ಖಾತರಿ ದೊರೆತಿತ್ತು. ಅದನ್ನು ರದ್ದುಪಡಿಸಿರುವ ಬಿಜೆಪಿ ಸರ್ಕಾರವು, ಉದ್ಯೋಗದ ದಿನಗಳನ್ನು ಕಡಿಮೆ ಮಾಡಿದೆ. ನರೇಗಾದ ಅಡಿಯಲ್ಲಿ ಕೇಂದ್ರವು ಶೇ.90ರಷ್ಟು ವೆಚ್ಚವನ್ನು ಭರಿಸಬೇಕಿತ್ತು. ಈಗ ಅದನ್ನು ಶೇ.60ಕ್ಕೆ ಇಳಿಸಿ, ಹೊಣೆಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿದೆ. ಈ ಹುನ್ನಾರವನ್ನು ವಿಫಲಗೊಳಿಸಬೇಕೆಂದು ಸಲಹೆ ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಾತನಾಡಿ, ಕೇಂದ್ರ ಸರ್ಕಾರವು ಏನು ಮಾಡಿದರೂ, ಗಾಂಧೀಜಿ ಅವರ ಹೆಸರನ್ನು ಅಳಿಸಲು ಸಾಧ್ಯ ವಿಲ್ಲ. ಬೆಳಗಾವಿ ಕಾಂಗ್ರೆಸ್ ಅಧಿವೇಶನವನ್ನು ಗಾಂಧೀಜಿ ಅವರು ಸಂಘಟಿಸಿದ ಪರಿ ಮತ್ತು ಅವರ ಅಭಿಪ್ರಾಯಗಳನ್ನು ಒಳಗೊಂಡ ಪುಸ್ತಕವನ್ನು ರಚಿಸಿದ್ದೇನೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕೈಯಲ್ಲಿ ಆ ಪುಸ್ತಕ ಬಿಡುಗಡೆ ಮಾಡಿಸಲು ಪ್ರಯತ್ನಿಸುತ್ತಿದ್ದೇನೆ ಎಂದರು.

ಇಡೀ ದೇಶದಲ್ಲೇ ನರೇಗಾವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿದ್ದು ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ. ನಮ್ಮಲ್ಲಿ 200 ಕೋಟಿ ರೂ. ವೆಚ್ಚ ಮಾಡಿ 57,000 ದನದ ಕೊಟ್ಟಿಗೆ, ಕುರಿ ಶೆಡ್, ಇಂಗುಗುಂಡಿ ನಿರ್ಮಿಸಿದ್ದೆವು. ಇದನ್ನು ಪ್ರಶಂಸಿಸುವ ಬದಲಿಗೆ ಕೇಂದ್ರ ಸರ್ಕಾರವು, ತನಿಖೆಗೆ ತಂಡಗಳನ್ನು ಕಳಿಸಿತ್ತು. ಏನೂ ಅಕ್ರಮ ಇಲ್ಲದ ಕಾರಣ, ನಮ್ಮ ತಾಲ್ಲೂಕಿಗೆ ಪ್ರಶಸ್ತಿ ನೀಡ ಬೇಕಾಯಿತು. ಜನರಿಗೆ ಉದ್ಯೋಗ ನೀಡುವ ಮತ್ತು ಆಸ್ತಿ ಸೃಜನೆಗೆ ಅವಕಾಶ ವಿರುವ ಈ ಯೋಜನೆಯನ್ನು ರದ್ದುಪಡಿಸಲು ಕೇಂದ್ರ ಮುಂದಾಗಿದೆ ಎಂದು ಆರೋಪಿಸಿದರು.

ಅತ್ಯಂತ ವ್ಯವಸ್ಥಿತವಾಗಿ ಈ ಹೋರಾಟ ಸಂಘಟಿಸಬೇಕು. ಕಾಂಗ್ರೆಸ್‌ನ ಪ್ರತಿ ಯೊಬ್ಬರೂ ಹೋರಾಟದಲ್ಲಿ ಭಾಗಿಯಾಗಬೇಕು. ಗ್ಯಾರಂಟಿ ಸಮಿತಿ ಸದಸ್ಯರು, ಎಸ್ಕಾಂಗಳು, ಆರೋಗ್ಯ ಸಮಿತಿ ಸೇರಿದಂತೆ ಇತರೆ ಇಲಾಖೆಗಳಿಂದ ನಾಮ ನಿರ್ದೇಶನ ಆಗಿರುವವರೆಲ್ಲರೂ ಹೋರಾಟದ ಹೊಣೆ ಹೊರಬೇಕು. ಅದರ ಉಸ್ತುವಾರಿಗೆ ಜಿ.ಸಿ.ಚಂದ್ರಶೇಖರ್ ನೇತೃತ್ವದಲ್ಲಿ ವೀಕ್ಷಕರನ್ನು ನೇಮಿಸಲಾಗುತ್ತದೆ ಎಂದರು.

---

# ರಾಷ್ಟ್ರೀಯ ಹೆದ್ದಾರಿಯಲ್ಲಿ 10 ಕಿ.ಮೀ. ಟ್ರಾಫಿಕ್ ಜಾಮ್

• ಪ್ರಜೋದಯ ವರದಿ



**ಸಕಲೇಶಪುರ:** ಸಾಲು ಸಾಲು ರಜೆ ಹಾಗು ಹೊಸ ವರ್ಷಾರಂಭದ ಹಿನ್ನಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಪ್ರಯಾಣಿಕರು ಪರ ದಾಡುವಂತಾಯಿತು.

ರಜಾ ದಿನವಾದ ಭಾನುವಾರ 10 ಕಿ.ಮೀ.ಗೂ ಅಧಿಕ ದೂರದ ವರೆಗೆ ವಾಹನಗಳು ನಿಂತಿದ್ದವು. ದೊಡ್ಡತಪ್ಪಲು ಬಳಿ ಟ್ರಾಫಿಕ್ ಜಾಮ್ ಉಂಟಾದ್ದರಿಂದ ಸಾರ್ವಜನಿಕರು ತೊಂದರೆ ಅನುಭವಿಸಿದರು. ಮಂಜ್ರಾಬಾದ್ ಕೋಟೆ ಸಮೀಪ ಕಳೆದ ಮೂರು ವರ್ಷಗಳಿಂದ ಹೆದ್ದಾರಿ ಕಾಮಗಾರಿ ಸ್ಥಗಿತಗೊಂಡಿರು ವುದೇ ಸಮಸ್ಯೆಗೆ ಕಾರಣವಾಗಿದೆ. ಪೊಲೀಸ್ ಇಲಾಖೆ ತಾತ್ಕಾಲಿಕವಾಗಿ ಸಂಚಾರ ನಿಯಂತ್ರಣ ಮಾಡುತ್ತಿದ್ದರೂ ಶಾಶ್ವತ ಪರಿಹಾರ ದೊರಕಿಲ್ಲ.

ರಾಜಧಾನಿ ಬೆಂಗಳೂರು ಹಾಗು ಬಂದರು ನಾಡು ಮಂಗಳೂರಿಗೆ ಸಂಪರ್ಕಿಸುವ ಪ್ರಮುಖ ರಸ್ತೆ ಇದಾಗಿದ್ದು ಐಟಿ ಉದ್ಯೋಗಿಗಳು ಕುಟುಂಬ ಸಮೇತ ಸಂಚರಿಸುವುದು ಸಾಮಾನ್ಯ. ಮಕ್ಕಳು, ಮಹಿಳೆಯರು ಗಂಟೆಗಟ್ಟಲೇ ರಸ್ತೆಯಲ್ಲೇ ಕಳೆದಿದ್ದು ಹೆದ್ದಾರಿ ಕಾಮಗಾರಿ ಬೇಗ ಮುಗಿಸುವಂತೆ ಒತ್ತಾಯಿಸಿದರು.

---

# ಎನ್.ಜಯಶ್ರೀ ನಿಧನ

• ಪ್ರಜೋದಯ ವರದಿ

**ಆಲೂರು:** ಅಬಕಾರಿ ಉದ್ಯಮಿ ಹಾಗು ಮದ್ಯ ಮಾರಾಟಗಾರರ ಸಂಘದ ಹಾಸನ ಜಿಲ್ಲಾಧ್ಯಕ್ಷ ಎನ್. ಲೀಲಾ ಕುಮಾರ್ ನಲ್ವಾಡೆ (ಅನಿಲ್ ಕುಮಾರ್) ಅವರ ಧರ್ಮಪತ್ನಿ ಎನ್.ಜಯಶ್ರೀ (65) ನಲ್ವಾಡೆ ಭಾನುವಾರ ನಿಧನರಾದರು.

ಮೃತರಿಗೆ ಮೂವರು ಮಕ್ಕಳಿದ್ದಾರೆ. ಚನ್ನರಾಯ ಪಟ್ಟಣದ ಸಕ್ಕರೆ ಕಾರ್ಖಾನೆ ಸಮೀಪದ ಅವರ ತೋಟ ದಲ್ಲಿ ಅಂತ್ಯಕ್ರಿಯೆ ನೆರವೇರಿತು.

---

# ಫಿಡೆರೇಟೆಡ್ ಚೆಸ್ ಟೂರ್ನಿ: ಅಗ್ರಸ್ಥಾನದಲ್ಲಿ ಅಜೀಶ್, ಇಶಾನ್, ವಿಘ್ನೇಶ್ವರನ್



• ಪ್ರಜೋದಯ ವರದಿ

**ಮಂಗಳೂರು:** ಕೇರಳದ ಅಜೀಶ್ ಆ್ಯಂಟನಿ, ಕರ್ನಾಟಕದ ಇಶಾನ್ ಭನ್ಸಾಲಿ ಮತ್ತು ತಮಿಳುನಾಡಿನ ವಿಘ್ನೇಶ್ವರನ್ ಇಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ಫಿಡೆ ರೇಟೆಡ್ ಮುಕ್ತ ಚೆಸ್ ಟೂರ್ನಿಯ ಆರನೇ ಸುತ್ತಿನ ಮುಕ್ತಾಯಕ್ಕೆ ಅಗ್ರಸ್ಥಾನಗಳನ್ನು ಹಂಚಿಕೊಂಡಿದ್ದಾರೆ.

ಕರ್ನಾಟಕ ತುಳು ಅಕಾಡೆಮಿಯ ಅಮೃತ ಸೋಮೇಶ್ವರ ಸಭಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮೂವರೂ ತಲಾ 5.5 ಪಾಯಿಂಟ್‌ಗಳಿಸಿದ್ದು ಉತ್ತಮ ಟೈಬ್ರೇಕರ್ ಆಧಾರದಲ್ಲಿ ಅಜೀಶ್ ಮೊದಲ ಸ್ಥಾನದಲ್ಲಿದ್ದಾರೆ. ಎರಡನೇ ಶ್ರೇಯಾಂಕಿತ ಆಟಗಾರ, ಇಂಟರ್‌ನ್ಯಾಷನಲ್ ಮಾಸ್ಟರ್ ಬಾಲಸುಬ್ರಹ್ಮಣ್ಯಂ ರಾಮನಾಥನ್ ಸೇರಿ 10 ಮಂದಿ ತಲಾ 5 ಪಾಯಿಂಟ್ ಗಳಿಸಿದ್ದಾರೆ. ಶನಿವಾರ 4 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದ ಅಜೀಶ್ ಮಂಗಳೂರಿನ ರವೀಶ್ ಕೋಟೆ ಭಾನುವಾರದ ಮೊದಲ ಸುತ್ತಿನಲ್ಲಿ ಮುಖಾಮುಖಿಯಾದರು. ಪಂದ್ಯ ಡ್ರಾ ಆಯಿತು. ಮುಂದಿನ ಸುತ್ತಿನಲ್ಲಿ ಅಜೀಶ್ ಮೂರನೇ ಶ್ರೇಯಾಂಕಿತ ತಮಿಳುನಾಡಿನ ಪ್ರಸನ್ನ ಕಾರ್ತಿಕ್ ವಿರುದ್ಧ ಜಯ ಸಾಧಿಸಿದರು. ರವೀಶ್ ಕೋಟೆ ಅವರು ಬಾಲಸುಬ್ರಹ್ಮಣ್ಯಂ ರಾಮನಾಥನ್ ಜೊತೆಯೂ ಡ್ರಾ ಸಾಧಿಸಿದರು.

ರವೀಶ್, ಗೋವಾದ ಜೋಶುವಾ ಮಾರ್ಕ್ ಟೆಲಿಸ್, ಕೇರಳದ ವೈಷ್ಣವ್ ಎಸ್, ಜಾಯ್ ಲಾಜರ್, ಸಿದ್ಧಾರ್ಥ್ ಶ್ರೀಕುಮಾರ್, ಸನೂಸ್ ಶಿಬು, ಅನಿಲ್ ಕುಮಾರ್ ಒ.ಟಿ, ಕರ್ನಾಟಕದ ರಾಘವ ಬೂಡೂರು ಹಾಗೂ ಗವಿಸಿದ್ದಯ್ಯ 5 ಪಾಯಿಂಟ್ ಗಳಿಸಿದ್ದಾರೆ. ಅಗ್ರ ಶ್ರೇಯಾಂಕಿತ, ಕೇರಳದ ಮಾರ್ತಾಂಡನ್ 4.5 ಪಾಯಿಂಟ್‌ಗಳೊಂದಿಗೆ 20 ಮಂದಿಯ ಜೊತೆ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

### 6ನೇ ಸುತ್ತಿನ ಪ್ರಮುಖ ಫಲಿತಾಂಶಗಳು

ಕೇರಳದ ಅಜೀಷ್ ಆ್ಯಂಟನಿಗೆ ತಮಿಳುನಾಡಿನ ಪ್ರಸನ್ನ ಕಾರ್ತಿಕ್ ವಿರುದ್ಧ ಜಯ ತಮಿಳುನಾಡಿನ ವಿಘ್ನೇಶ್ವರನ್‌ಗೆ ಕೇರಳದ ಅಮನ್‌ಲಾಲ್ ಎದುರು, ಕರ್ನಾಟಕದ ಇಶಾನ್ ಭನ್ಸಾಲಿಗೆ ಕರ್ನಾಟಕದ ಇಂದ್ರಜೀತ್ ವಿರುದ್ಧ, ಕರ್ನಾಟಕದ ಇಶಾಬ್ ಭನ್ಸಾಲಿಗೆ ಕರ್ನಾಟಕದ ಇಂದ್ರಜೀತ್ ಮಜುಂದಾರ್ ವಿರುದ್ಧ ಜಯ. ಕರ್ನಾಟಕದ ರವೀಶ್ ಕೋಟ್ ಮತ್ತು ತಮಿಳುನಾಡಿನ ಬಾಲಸುಬ್ರಹ್ಮಣ್ಯಂ ರಾಮನಾಥನ್, ಗೋವಾದ ಜೋಶುವಾ ಮಾರ್ಕ್ ಟೆಲಿಸ್ ಮತ್ತು ಕೇರಳದ ವೈಷ್ಣವ್ ಎಸ್ ನಡುವಿನ ಪಂದ್ಯ ಡ್ರಾ.

---

# ಆಸಿಸ್ ದಾಖಲೆ ಧ್ವಂಸ: ಶ್ರೀಲಂಕಾಗೆ 222 ರನ್ ಗುರಿ

• ಪ್ರಜೋದಯ ವರದಿ

**ತಿರುವನಂತಪುರಂ:** ಪ್ರವಾಸಿ ಶ್ರೀಲಂಕಾ ವಿರುದ್ಧದ ಟಿ-20 ಸರಣಿಯ 4ನೇ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿ ಸ್ಮೃತಿ ಮಂಧಾನ ಮತ್ತು ಶಫಾಲಿ ವರ್ಮಾ ಜೋಡಿ ಐತಿಹಾಸಿಕ ದಾಖಲೆ ನಿರ್ಮಿಸಿದೆ.

ಕೇರಳದ ತಿರುವನಂತಪುರಂನಲ್ಲಿರುವ ಗ್ರೀನ್ ಫೀಲ್ಡ್ ಇಂಟರ್ ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಭಾನುವಾರ ನಡೆದ 4ನೇ ಟಿ-20 ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ವನಿತೆಯರು 221 ರನ್ ಗಳಿಸಿ ಶ್ರೀಲಂಕಾಗೆ ಗೆಲ್ಲಲು 222 ರನ್ ಗಳ ಬೃಹತ್ ಗುರಿ ನೀಡಿದೆ.

ಈ ಪಂದ್ಯದಲ್ಲಿ ಭಾರತದ ಆರಂಭಿಕ ಜೋಡಿ ಸ್ಮೃತಿ ಮಂಧಾನ ಮತ್ತು ಶಫಾಲಿ ವರ್ಮಾ ಜೋಡಿ ಆರಂಭದಿಂದಲೇ ಶ್ರೀಲಂಕಾ ಬೌಲರ್‌ಗಳ ಮೇಲೆ ಸವಾರಿ ಮಾಡಿತು. ಈ ಜೋಡಿ ಭಾರತಕ್ಕೆ ಸ್ಫೋಟಕ ಆರಂಭ ನೀಡಿತು. ಮೊದಲ ವಿಕೆಟ್‌ಗೆ ಈ ಜೋಡಿ ದಾಖಲೆಯ 162 ರನ್ ಜೊತೆಯಾಟ ನೀಡಿತು.


ಸ್ಮೃತಿ ಮಂಧಾನ 48 ಎಸೆತಗಳಲ್ಲಿ 3 ಸಿಕ್ಸರ್ ಮತ್ತು 11 ಬೌಂಡರಿಗಳ ನೆರವಿನಿಂದ 80 ರನ್ ಚಚ್ಚಿದರೆ, ಮತ್ತೊಂದು ತುದಿಯಲ್ಲಿ ಅವರಿಗೆ ಸ್ಪರ್ಧೆ ನೀಡುತ್ತಿದ್ದ ಶಫಾಲಿ ವರ್ಮಾ ಕೂಡ 46 ಎಸೆತಗಳಲ್ಲಿ 1 ಸಿಕ್ಸರ್ ಮತ್ತು 12 ಬೌಂಡರಿಗಳ ನೆರವಿನಿಂದ 79 ರನ್ ಕಲೆಹಾಕಿದರು.



---

# ದೇಶದ ನಾಗರಿಕ ವಿಮಾನಯಾನ ಮಾರುಕಟ್ಟೆಯಲ್ಲಿ ಇಂಡಿಗೋ ಪಾಲು ಇಳಿಕೆ

• ಪ್ರಜೋದಯ ವರದಿ



**ನವದೆಹಲಿ:** ದೇಶದ ನಾಗರಿಕ ವಿಮಾನಯಾನ ಮಾರು ಕಟ್ಟೆಯಲ್ಲಿ ಇಂಡಿಗೊ ಕಂಪನಿ ಪಾಲು ನವೆಂಬರ್‌ನಲ್ಲಿ ಶೇ. 63.6ಕ್ಕೆ ಇಳಿದಿದೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು ತಿಳಿಸಿದೆ.

ಅಕ್ಟೋಬರ್‌ನಲ್ಲಿ ಕಂಪನಿಯು ಶೇ.65.6ರಷ್ಟು ಪಾಲು ಹೊಂದಿತ್ತು. ಈ ತಿಂಗಳ ಆರಂಭದಲ್ಲಿ ಇಂಡಿಗೊ ಕಂಪನಿಯ ವಿಮಾನಗಳ ಕಾರ್ಯಾಚರಣೆಯಲ್ಲಿ ಉಂಟಾದ ಅಡಚಣೆಯು ಇಳಿಕೆಗೆ ಕಾರಣ ಎಂದು ಡಿಜಿಸಿಎ ಹೇಳಿದೆ.

ಏರ್ ಇಂಡಿಯಾ ಸಮೂಹ (ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್) ಮತ್ತು ಸ್ಪೈಸ್‌ಜೆಟ್ ಮಾರುಕಟ್ಟೆ ಪಾಲು ಕ್ರಮವಾಗಿ ಶೇ. 26.7 ಮತ್ತು ಶೇ.3.7ಕ್ಕೆ ಹೆಚ್ಚಳವಾಗಿದೆ. ಅಕ್ಟೋಬರ್‌ನಲ್ಲಿ ಈ ಪ್ರಮಾಣ ಶೇ.25.7 ಮತ್ತು ಶೇ.2.6ರಷ್ಟಿತ್ತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK